# ಸಮಾಜ ಕಲ್ಯಾಣ ಇಲಾಖೆ

## ದಿನಾಂಕ: 02-06-2017 ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ - 2013 ರ ಪ್ರಕಾರ ರಾಜ್ಯ ಅನುಸೂಚಿತ ಜಾತಿಗಳು / ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಗಳು

**ಸ್ಥಳ: ಕೊಠಡಿ ಸಂಖ್ಯೆ : 334, 3ನೇ ಮಹಡಿ,**
**ಸಮ್ಮೇಳನ ಸಭಾಂಗಣ**
**ವಿಧಾನಸೌಧ, ಬೆಂಗಳೂರು**

### ಸಭೆಗೆ ಹಾಜರಾದ ಸದಸ್ಯರುಗಳು ಮತ್ತು ಅಧಿಕಾರಿಗಳ ವಿವರ:-

| | | |
|---|---|---|
| 1 | ಶ್ರೀ. ಸಿದ್ದರಾಮಯ್ಯ,<br>ಸನ್ಮಾನ್ಯ ಮುಖ್ಯಮಂತ್ರಿಗಳು | ಅಧ್ಯಕ್ಷರು |
| 2 | ಶ್ರೀ. ಹೆಚ್. ಆಂಜನೇಯ<br>ಮಾನ್ಯ ಸಮಾಜ ಕಲ್ಯಾಣ ಹಾಗೂ<br>ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು | ಸದಸ್ಯರು |
| 3 | ಶ್ರೀ. ಟಿ.ಬಿ. ಜಯಚಂದ್ರ<br>ಮಾನ್ಯ ಸಂಸದೀಯ ವ್ಯವಹಾರಗಳು,<br>ಕಾನೂನು ಹಾಗೂ ಸಣ್ಣ ನೀರಾವರಿ ಸಚಿವರು | ಸದಸ್ಯರು |
| 4 | ಶ್ರೀ ಬಸವರಾಜ ರಾಯರಡ್ಡಿ<br>ಮಾನ್ಯ ಉನ್ನತ ಶಿಕ್ಷಣ ಸಚಿವರು | ಸದಸ್ಯರು |
| 5 | ಶ್ರೀ ಕಾಗೋಡು ತಿಮ್ಮಪ್ಪ<br>ಮಾನ್ಯ ಕಂದಾಯ ಸಚಿವರು | ಸದಸ್ಯರು |
| 6 | ಶ್ರೀ. ಆರ್. ಧ್ರುವನಾರಾಯಣ್,<br>ಮಾನ್ಯ ಲೋಕಸಭಾ ಸದಸ್ಯರು | ಸದಸ್ಯರು |
| 7 | ಡಾ॥ ಉಮೇಶ್ ಜಾದವ್<br>ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 8 | ಶ್ರೀ. ಕೆ.ಎನ್. ರಾಜಣ್ಣ,<br>ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 9 | ಶ್ರೀ. ರಾಜು ಅಲಗೂರು<br>ಮಾನ್ಯ ವಿಧಾನಸಭಾ ಸದಸ್ಯರು | ಸದಸ್ಯರು |
| 10 | ಶ್ರೀ ಸುಭಾಷ್ ಚಂದ್ರ ಖುಂಟಿಆ, ಭಾ.ಆ.ಸೇ.,<br>ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, | ವಿಶೇಷ<br>ಆಹ್ವಾನಿತರು |
| 11 | ಶ್ರೀಮತಿ ಕೆ. ರತ್ನಪ್ರಭ, ಭಾ.ಆ.ಸೇ.,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು<br>(ಪ.ಜಾ.ಉ.ಯೋ ಮೇಲುಸ್ತುವಾರಿ ಅಧಿಕಾರಿ) | ವಿಶೇಷ<br>ಆಹ್ವಾನಿತರು |
| 12 | ಶ್ರೀ. ವಿಜಯ ಭಾಸ್ಕರ್, ಭಾ.ಆ.ಸೇ.,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ<br>ಅಭಿವೃದ್ಧಿ ಆಯುಕ್ತರು | ಸದಸ್ಯರು |

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

| | | |
|---|---|---|
| 13 | ಶ್ರೀ. ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ | ಸದಸ್ಯರು |
| 14 | ಶ್ರೀಮತಿ ರೇಣುಕಾ ಚಿದಂಬರಂ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ | ಸದಸ್ಯರು |
| 15 | ಶ್ರೀ. ಪಿ. ಮಣಿವಣ್ಣನ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |
| 16 | ಡಾ॥ ಇ. ವೆಂಕಟಯ್ಯ, ಭಾ.ಆ.ಸೇ (ನಿವೃತ್ತ) | ನೋಡಲ್ ಏಜೆನ್ಸಿ ಸಲಹೆಗಾರರು |
| 17 | ಉಪ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರುವ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಹಾಗೂ ಇಲಾಖಾ ಮುಖ್ಯಸ್ಥರುಗಳು. | ವಿಶೇಷ ಆಹ್ವಾನಿತರು. |

ಪ್ರಾರಂಭದಲ್ಲಿ ನೋಡಲ್ ಏಜೆನ್ಸಿ ಅಧ್ಯಕ್ಷರು ಹಾಗೂ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ರಾಜ್ಯ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ರಾಜ್ಯ ಅಭಿವೃದ್ಧಿ ಪರಿಷತ್ತಿನ ಅಧ್ಯಕ್ಷರಾದ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಭೆಯಲ್ಲಿ ಹಾಜರಿದ್ದ ಮಾನ್ಯ ಸಚಿವರು, ಮಾನ್ಯ ಸಂಸದರು ಮತ್ತು ಶಾಸಕರು (ಸದಸ್ಯರು), ವಿಶೇಷ ಆಹ್ವಾನಿತರು ಮತ್ತು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು.

ನಂತರ ಸಭೆಯನ್ನು ಉದ್ದೇಶಿಸಿ ಮಾತನಾಡಿ, 2016-17ನೇ ಸಾಲಿನಲ್ಲಿ ಒಟ್ಟಾರೆ ಶೇ.91.03 ರಷ್ಟು ಈ ಕೆಳಗಿನಂತೆ ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿದರು.

## <u>2016-17ನೇ ಸಾಲಿನ ಪ್ರಗತಿಯ ಸಾರಾಂಶ</u>

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ಹಂಚಿಕೆ | ಖರ್ಚು | ನಿಗಧಿಗೆ % | ಅಂದಾಜು ಉಳಿಕೆ |
|---|---|---|---|---|
| SCSP | 14253.26 | 12998.37 | 91.20 | 1254.89 |
| TSP | 5631.67 | 5102.30 | 90.60 | 529.37 |
| Total | 19884.43 | 18100.67 | 91.03 | 1784.26 |

ವಿಷಯ ಸೂಚಿಯಲ್ಲಿ ತಿಳಿಸಿರುವಂತೆ 8 ಇಲಾಖೆಗಳು ಶೇ. 91 ಕ್ಕಿಂತ ಕಡಿಮೆ ಸಾಧನೆ ಮಾಡಿರುತ್ತಾರೆ ಮತ್ತು ಸಣ್ಣ ನೀರಾವರಿ ಕೇವಲ 9.54%ರಷ್ಟು ಸಾಧನೆ ಮಾಡಿರುತ್ತಾರೆ ಮತ್ತು ಕಾನೂನು ಇಲಾಖೆ ಯಾವುದೇ ಖರ್ಚುಮಾಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

2017-18ನೇ ಸಾಲಿನಲ್ಲಿ SCSP/TSP ಅಡಿಯಲ್ಲಿ ಒಟ್ಟು ರೂ.27703.54 ಕೋಟಿಗಳನ್ನು ಒದಗಿಸಲಾಗಿ, ಸದರಿ ಅನುದಾನಕ್ಕೆ ವಿವಿಧ ಅಭಿವೃದ್ಧಿ ಇಲಾಖೆಗಳು ಸಲ್ಲಿಸಿದ ಕ್ರಿಯಾ ಯೋಜನೆಗಳನ್ನು ನೋಡಲ್ ಏಜೆನ್ಸಿಯ ಸಭೆಯಲ್ಲಿ ಚರ್ಚಿಸಿ, ರಾಜ್ಯ ಪರಿಷತ್ತಿಗೆ ಶಿಫಾರಸ್ಸು ಮಾಡಲಾಗಿದೆ. ಕೆಲವು ಅಧಿಕಾರಿಗಳು SCSP/TSP ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಲ್ಲಿ ಮುತುವರ್ಜಿ ವಹಿಸಿ ಅನುಷ್ಠಾನಮಾಡುತ್ತಿಲ್ಲವೆಂದು ಗಮನಿಸಲಾಗಿದೆ. ಎಲ್ಲಾ ಇಲಾಖೆಗಳಿಗೆ ಪ.ಜಾತಿ / ಪ.ಪಂಗಡದವರ ಅಭಿವೃದ್ಧಿಗಾಗಿ 2017-18ನೇ ಸಾಲಿನ ಆಯವ್ಯಯದಲ್ಲಿ ಹೆಚ್ಚಿನ

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಅನುದಾನ ಒದಗಿಸಿರುವ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಸಲ್ಲಿಸಿ, ಸಭೆಯನ್ನು ನಡೆಸಿಕೊಡುವಂತೆ ಕೋರಿದರು.

ಸನ್ಮಾನ್ಯ ಮುಖ್ಯಮಂತ್ರಿಗಳು ಮೇಲ್ಕಂಡ ವಿಷಯಗಳ ಬಗ್ಗೆ ಪರಿಶೀಲಿಸಿ, ಕೆಲವು ಇಲಾಖೆಗಳು ಶೇ.100 ಅನುದಾನ ವೆಚ್ಚಮಾಡದೆ ಇರುವ ಬಗ್ಗೆ ಪ್ರಶ್ನಿಸಿ, ಪ್ರಸಕ್ತ ಸಾಲಿನಲ್ಲಿ ಎಲ್ಲಾ ಇಲಾಖೆಗಳು ಶೇ.100 ರಷ್ಟು ಪ್ರಗತಿ ಸಾಧಿಸಬೇಕೆಂದು ಸೂಚಿಸಿದರು. 2014-15ನೇ ಸಾಲಿನಲ್ಲಿ ವೆಚ್ಚವಾಗದೆ ಇರುವ ಅನುದಾನವನ್ನು 2016-17ನೇ ಸಾಲಿನಲ್ಲಿ ಒದಗಿಸಿದ್ದು, ಕೆಲವು ಇಲಾಖೆಗಳು ಶೇ.100 ರಷ್ಟು ಅನುದಾನ ಖರ್ಚುಮಾಡದೆ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ವಿವರಗಳನ್ನು ಕೇಳಿದರು. ಸುಮಾರು ರೂ.57.61 ಕೋಟಿ ಉಪಯೋಗಿಸದೇ ಇರುವ ಅನುದಾನ ವ್ಯಪಗತವಾಗಿದೆ ಎಂದು ಭಾವಿಸದೇ, ಇದನ್ನು ಇಲಾಖೆಗಳಿಗೆ ಈ ಸಾಲಿನಲ್ಲಿ ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸುತ್ತಾ, ಅವಶ್ಯಕತೆ ಇದ್ದಲ್ಲಿ ಕಾಯ್ದೆಗೆ ಸೂಕ್ತ ತಿದ್ದುಪಡಿ ಮಾಡಲು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಜರುಗಿಸಲು ಸಮಾಜ ಕಲ್ಯಾಣ ಇಲಾಖೆಗೆ ಸೂಚಿಸಿದರು.

ಮುಂದುವರೆದು 2016-17ನೇ ಸಾಲಿನಲ್ಲಿ 91% ರಿಂತ ಕಡಿಮೆ ಪ್ರಗತಿ ಸಾಧಿಸಿದ ಕಾನೂನು, ಸಣ್ಣ ನೀರಾವರಿ, ಲೋಕೋಪಯೋಗಿ, ವಸತಿ, ವಾರ್ತಾ, ಆರೋಗ್ಯ, ಕಾರ್ಮಿಕ, ಆರ್.ಡಿ.ಪಿ.ಆರ್ ಇಲಾಖೆಗಳ ಸಂಬಂಧಿಸಿದ ಅಧಿಕಾರಿಗಳಿಂದ ವಿವರಣೆ ಕೇಳಿದರು. ಈ ಇಲಾಖೆಗಳ ಕಾರ್ಯದರ್ಶಿಗಳಿಗೆ/ಮುಖ್ಯಸ್ಥರಿಗೆ ನೋಟಿಸ್ ನೀಡಿ ಕ್ರಮ ಜರುಗಿಸಿ ಎಂದು ನೋಡಲ್ ಏಜೆನ್ಸಿ ಅಧ್ಯಕ್ಷರಿಗೆ ತಿಳಿಸಿದರು. ಯಾವುದೇ ಇಲಾಖೆಯಲ್ಲಿ ಪರಿಷತ್ತಿನಿಂದ ಅನುಮೋದಿಸಿದ ಕಾರ್ಯಕ್ರಮಗಳನ್ನು ಯಾವ ಕಾರಣಕ್ಕೂ ಬದಲಾವಣೆ ಮಾಡತಕ್ಕದಲ್ಲ ಮತ್ತು ಅವುಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕೆಂದು ಸಹ ತಿಳಿಸಿದರು. ಯಾವುದೇ ಇಲಾಖೆಗಳು ಪ್ರಗತಿ ಸಾಧಿಸುವಲ್ಲಿ ವಿಫಲವಾಗಬಾರದು ಮತ್ತು ವಿಫಲವಾದಲ್ಲಿ ಅವರ ವಿರುದ್ಧ ಕಾಯ್ದೆಯಂತೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಸಹ ಎಚ್ಚರಿಕೆ ನೀಡಿದರು.

ನಂತರ 2017-18ನೇ ಸಾಲಿನ ಕ್ರಿಯಾ ಯೋಜನೆಗಳ ಬಗ್ಗೆ ಇಲಾಖಾವಾರು ವಿವರಿಸುವಂತೆ, ಸಮಾಜ ಕಲ್ಯಾಣ ಇಲಾಖೆಗೆ ಸೂಚಿಸಿದ್ದು ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು SCSP / TSP ಸಲಹೆಗಾರರು ಪ್ರತಿಯೊಂದು ಇಲಾಖೆಗಳ ಕಾರ್ಯಕ್ರಮಗಳ ಬಗ್ಗೆ ಮತ್ತು ತೆಗೆದುಕೊಳ್ಳಬೇಕಾದ ತೀರ್ಮಾನಗಳ ಬಗ್ಗೆ ವಿವರಿಸಿದರು.

ಎಲ್ಲಾ ಇಲಾಖೆಗಳ ಕ್ರಿಯಾಯೋಜನೆಗಳ ಬಗ್ಗೆ ವಿವರವಾಗಿ ಚರ್ಚಿಸಿ ಈ ಕೆಳಗಿನಂತೆ ಇಲಾಖೆವಾರು ಪ್ರಮುಖ ವಿಷಯಗಳ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.

1. **ಕೃಷಿ ಇಲಾಖೆ:-**

ಕೃಷಿ ಇಲಾಖೆಯ ಕ್ರಿಯಾ ಯೋಜನೆಯನ್ನು ವಿವರಿಸುತ್ತಿರುವ ಸಂದರ್ಭದಲ್ಲಿ, ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಹಿಂದಿನ ವರ್ಷ ಸಹ ಪ.ಜಾತಿ / ಪ.ಪಂಗಡ ಕೃಷಿ ಕಾರ್ಮಿಕರು ಮತ್ತು ಸಣ್ಣ ರೈತರನ್ನು ವಿದೇಶ ಪ್ರವಾಸಕ್ಕೆ ಕಳುಹಿಸಲು ತೀರ್ಮಾನಿಸಿದ್ದರೂ ಇಲಾಖೆಯು ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವುದಿಲ್ಲ. ಆದ್ದರಿಂದ ಈ ವರ್ಷ ತಕ್ಷಣವೇ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಕೃಷಿ ಇಲಾಖೆಯು ಫಲಾನುಭವಿಗಳನ್ನು ಆಯ್ಕೆ ಮಾಡಿ, ಅನುಷ್ಠಾನಗೊಳಿಸಲು ಸೂಚಿಸಿದರು.

ಮಾನ್ಯ ಕಂದಾಯ ಸಚಿವರು ಮಾತನಾಡಿ, ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳನ್ನು ಒದಗಿಸಿದ ರೈತರಿಗೆ ಸಮಗ್ರ ಅಭಿವೃದ್ಧಿ ಮತ್ತು ಹೆಚ್ಚಿನ ಇಳುವರಿ ಪಡೆಯಲು ಹನಿ ನೀರಾವರಿ ಮತ್ತು ತುಂತುರು ನೀರಾವರಿ ಸೌಕರ್ಯ ಕಲ್ಪಿಸಲು ಪ್ರಸ್ತಾಪಿಸಿದರು.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಕೃಷಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ಮುಂದುವರೆದ ಕಾರ್ಯಕ್ರಮಗಳ ಜೊತೆಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಟ್ರಾಕ್ಟರ್‌ಗಳಿಗೆ ಹಾಲಿ ನೀಡುತ್ತಿರುವ ಸಹಾಯಧನ ರೂ.2.00 ಲಕ್ಷಗಳನ್ನು ರೂ.3.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ ಮತ್ತು ಈ ಸಹಾಯಧನವನ್ನು ಪ.ಜಾತಿ / ಪ.ಪಂಗಡದ ಫಲಾನುಭವಿಗಳಿಗೆ ಎಲ್ಲಾ ಸಾಮರ್ಥ್ಯದ ಟ್ರ್ಯಾಕ್ಟರ್‌ಗಳಿಗೆ ನೀಡುವುದು.

2. ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳನ್ನು ಒದಗಿಸಿದ ಫಲಾನುಭವಿಗಳಿಗೆ ಸಮಗ್ರ ಅಭಿವೃದ್ಧಿಗಾಗಿ ಕೃಷಿ ಹೊಂಡ, ತುಂತುರು ನೀರಾವರಿ, ಹನಿ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು (ಗಂಗಾ ಕಲ್ಯಾಣ ಫಲಾನುಭವಿಗಳ ಪಟ್ಟಿಯನ್ನು ಪ.ಜಾತಿ / ಪ.ಪಂಗಡ ನಿಗಮಗಳಿಂದ ಒದಗಿಸಲಾಗುವುದು)

3. ಪ.ಜಾತಿ / ಪ.ಪಂಗಡದ ಕೃಷಿ ಕಾರ್ಮಿಕರು ಮತ್ತು ಸಣ್ಣ ರೈತರನ್ನು (1,000 ಜನ) ವಿದೇಶ ಅಧ್ಯಯನ ಪ್ರವಾಸಕ್ಕೆ ಕಳುಹಿಸುವುದು.

4. ಗ್ರಾಮೀಣ ಕೃಷಿ ಯಂತ್ರೋಪಕರಣ / ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಪ.ಜಾತಿ / ಪ.ಪಂಗಡ ಜನರಿಗೆ ಗರಿಷ್ಠ 75ರಷ್ಟು ಸಹಾಯಧನ ನೀಡುವುದು. (ಸಹಾಯಧನ ಗರಿಷ್ಠ ರೂ.5.00 ಲಕ್ಷ)

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

## 2. ತೋಟಗಾರಿಕೆ ಇಲಾಖೆ :

ಶ್ರೀ. ಆರ್. ಧ್ರುವನಾರಾಯಣ್, ಮಾನ್ಯ ಲೋಕಸಭಾ ಸದಸ್ಯರು ಮಾತನಾಡಿ, ಪಾಲಿಹೌಸ್ ಯೋಜನೆ ಅನುಷ್ಠಾನದಲ್ಲಿ ಜಿಲ್ಲಾ ಮಟ್ಟದಲ್ಲಿ ಅನುದಾನ ದುರುಪಯೋಗವಾಗಿರುವ ಬಗ್ಗೆ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ತನಿಖೆ ನಡೆಸಿ ವರದಿಯನ್ನು ನೀಡಲು ತಿಳಿಸಿದರು. ಮುಂದುವರೆದು, ಪ.ಜಾತಿ / ಪ.ಪಂಗಡ ರೈತರಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಲು ಒತ್ತಾಯಿಸಿದರು.

SCSP / TSP ಸಲಹೆಗಾರರು ಮಾತನಾಡಿ, ಹಾಪ್‌ಕಾಮ್ಸ್ ಮುಖಾಂತರ ಮಾರುಕಟ್ಟೆ ವ್ಯವಸ್ಥೆ ಮಾಡಲು ತೋಟಗಾರಿಕೆ ಇಲಾಖೆಗೆ ತಿಳಿಸಿದರು.

ತೋಟಗಾರಿಕೆ ಇಲಾಖೆಯ ಕ್ರಿಯಾ ಯೋಜನೆಯ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳನ್ನು ಒದಗಿಸಿದ ಫಲಾನುಭವಿಗಳಿಗೆ ಸಮಗ್ರ ಅಭಿವೃದ್ಧಿಗಾಗಿ ಕೃಷಿ ಹೊಂಡ, ತುಂತುರು, ಹನಿ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

2. ಪಾಲಿ ಹೌಸ್ ನಿರ್ಮಾಣ ಒಂದು ಎಕರೆಗೆ ಮಿತಿಗೊಳಿಸಿ ಘಟಕ ವೆಚ್ಚದಲ್ಲಿ 90% ಸಹಾಯಧನ ನೀಡುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ)**

## 3. ರೇಷ್ಮೆ ಇಲಾಖೆ

ರೇಷ್ಮೆ ಇಲಾಖೆಗೆ ಸಂಬಂಧಿಸಿದಂತೆ, ಶ್ರೀ. ಧ್ರುವನಾರಾಯಣ್, ಮಾನ್ಯ ಲೋಕಸಭಾ ಸದಸ್ಯರು ಮಾತನಾಡಿ, ಚಾಮರಾಜನಗರ ಜಿಲ್ಲೆಯಲ್ಲಿ ರೇಷ್ಮೆ ರೀಲಿಂಗ್ ಘಟಕಗಳಿಗೆ ಸಹಾಯಧನ ನೀಡುವುದನ್ನು ಸ್ಥಗಿತಗೊಳಿಸಿದ್ದು, ಇದನ್ನು ಮುಂದುವರೆಸಲು ಒತ್ತಾಯಿಸಿದರು.

ಇಲಾಖೆಯ ಮುಖ್ಯಸ್ಥರು ಮೇಲ್ಕಂಡ ವಿಷಯದ ಬಗ್ಗೆ ವಿವರಿಸಿ, ಸಹಾಯಧನವನ್ನು ಸ್ಥಗಿತಗೊಳಿಸಿರುವುದಿಲ್ಲ. ಆದರೆ ಘಟಕ ವೆಚ್ಚ ಹೆಚ್ಚಿಗೆ ಇರುವುದರಿಂದ ಸಹಾಯಧನವನ್ನು ಕಡಿಮೆಮಾಡಲಾಗಿದೆ. ಆದರೆ 2015-16ನೇ ಸಾಲಿನಲ್ಲಿ ನೀಡಿದ ಸಹಾಯಧನ ದರಗಳಂತೆ ಈ ವರ್ಷ ನೀಡಲಾಗುವುದೆಂದು ಉತ್ತರಿಸಿದರು.
ಘಟಕವೆಚ್ಚದ ಶೇಕಡವಾರಿನಲ್ಲಿ ಯಾವುದೇ ವ್ಯತ್ಯಾಸ ಮಾಡದೆ, ಘಟಕ ವೆಚ್ಚವನ್ನು ಪುನರ್ ಪರಿಶೀಲಿಸುವ ಸಂಬಂಧ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ರೀತಿಯಲ್ಲಿಯೇ ರೇಷ್ಮೆ ಇಲಾಖೆಯು ಸಹ ಕ್ರಮ ವಹಿಸಲು ಸೂಚಿಸಲಾಯಿತು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ರೇಷ್ಮೆ ಇಲಾಖೆ)**

## 4. ಪಶು ಸಂಗೋಪನೆ ಇಲಾಖೆ

ಪಶು ಸಂಗೋಪನೆ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಹಾಲು ಉತ್ಪಾದಕರ ಪ್ರೋತ್ಸಾಹಧನ ರೂ.5/- ಪ್ರತಿ ಲೀಟರ್‌ಗೆ ಹೆಚ್ಚಿಸಲಾಗಿದೆ.
2. ಕುರಿ / ಮೇಕೆ / ಹಂದಿ ಇತ್ಯಾದಿಗಳಿಗೆ ಹಾಲಿ ಇರುವ ಶೇ.50 ರ ಬದಲು ಶೇ.90 ರಷ್ಟು ಸಹಾಯಧನ, ಶೇ.10 ರಷ್ಟು ಫಲಾನುಭವಿಗಳ ವಂತಿಕೆ (ಸಹಾಯಧನ ಗರಿಷ್ಠ ರೂ.60,000/- (10+1) ಹೆಚ್ಚಿಸಲಾಗಿದೆ.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಇಲಾಖೆ)**

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

## 5. ಮೀನುಗಾರಿಕೆ ಇಲಾಖೆ

ಮೀನುಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ, ಶ್ರೀ. ಧ್ರುವನಾರಾಯಣ್, ಮಾನ್ಯ ಲೋಕಸಭಾ ಸದಸ್ಯರು ಮಾತನಾಡಿ, ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ನೀಡಿದವರಿಗೆ **Fish Pond** ಗಳನ್ನು ನೀಡಿದಲ್ಲಿ ಅವರ ಆದಾಯ ಹೆಚ್ಚಿಸಬಹುದೆಂದು ಪ್ರಸ್ಥಾಪಿಸಿದರು.

ನಿರ್ದೇಶಕರು, ಮೀನುಗಾರಿಕೆ ಇಲಾಖೆ ರವರು ಮಾತನಾಡಿ, ಕೊಳವೆಬಾವಿಗಳಲ್ಲಿ 3 ರಿಂದ 4 ಇಂಚು ನೀರು ಲಭ್ಯವಿದ್ದಲ್ಲಿ ಮಾತ್ರ **Fish Pond** ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿ, ಇದರ ಬಗ್ಗೆ ಪರಿಶೀಲಿಸಲಾಗುವುದೆಂದು ತಿಳಿಸಿದರು.

ಮೀನುಗಾರಿಕೆ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಮತ್ಸ್ಯಾಶ್ರಯ ಯೋಜನೆಯಡಿ ಮನೆ ನಿರ್ಮಾಣಕ್ಕಾಗಿ ಗ್ರಾಮೀಣ ಪ್ರದೇಶದವರಿಗೆ ರೂ.1.75 ಲಕ್ಷ ಮತ್ತು ನಗರ ಪ್ರದೇಶದವರಿಗೆ ರೂ.2.00 ಲಕ್ಷಗಳ ಘಟಕ ವೆಚ್ಚವನ್ನು ಹೆಚ್ಚಿಸಲಾಗಿದೆ.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮೀನುಗಾರಿಕೆ ಇಲಾಖೆ)**

## 6. ಸಾರಿಗೆ ಇಲಾಖೆ

ಸಾರಿಗೆ ಇಲಾಖೆಯ ಬಗ್ಗೆ ವಿವರಿಸುತ್ತಾ, ಸದರಿ ಇಲಾಖೆಯವರು ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ ರವರು ಮಾತನಾಡಿ, ಪ್ರಸ್ತುತ ಬಸ್‌ಪಾಸ್ ದರದಲ್ಲಿ ಶೇ.25 ರಷ್ಟು ದರವನ್ನು ವಿದ್ಯಾರ್ಥಿಗಳು ನೀಡಬೇಕಾಗಿದೆ. ಉಚಿತವಾಗಿ ಬಸ್‌ಪಾಸ್ ನೀಡಿದಲ್ಲಿ ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಒಪ್ಪಬಹುದೆಂದು ಕೋರಿದರು.

ಮುಂದುವರೆದು, ಉಚಿತ ಬಸ್‌ಪಾಸ್‌ಗಳಿಗೆ ಹೆಚ್ಚುವರಿಯಾಗಿ ರೂ.104.00 ಕೋಟಿಗಳ ವೆಚ್ಚ ತಗಲುತ್ತದೆ ಎಂದು ತಿಳಿಸಿದರು. ಈ ವಿಷಯದ ಬಗ್ಗೆ ಚರ್ಚಿಸಿ, ಉಚಿತ ಬಸ್‌ಪಾಸ್‌ಗಳನ್ನು ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಿಗೆ ನೀಡಲು ಈ ಕೆಳಗಿನಂತೆ ನಿರ್ಧರಿಸಲಾಯಿತು.

1. ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಿಗೆ ಬಸ್ ಪಾಸ್‌ಗಳನ್ನು ಉಚಿತವಾಗಿ ನೀಡಲಾಗುವುದು. ಇದಕ್ಕೆ ಅವಶ್ಯವಿರುವ ರೂ.104.00 ಕೋಟಿ ಹೆಚ್ಚುವರಿ ಅನುದಾನವನ್ನು ಇತರೆ ಇಲಾಖೆಗಳಲ್ಲಿ ಉಳಿಕೆಯಾಗುವ ಅನುದಾನದಲ್ಲಿ ಮರುಹೊಂದಾಣಿಕೆ ಮಾಡಿ ನೀಡುವುದು. ಆದರೆ ಸಾರಿಗೆ ಇಲಾಖೆಗೆ ಪ್ರಸಕ್ತ ಸಾಲಿನಲ್ಲಿ ನೀಡಿದ ರೂ.228.29 ಕೋಟಿಗಳ ಪೈಕಿ ಬಸ್‌ಪಾಸ್‌ಗಳನ್ನು ಉಚಿತವಾಗಿ ನೀಡಲು ಎಷ್ಟು ಹಣ ಉಪಯೋಗಿಸಲು ಸಾಧ್ಯವಾಗುತ್ತದೆ ಮತ್ತು ಎಷ್ಟು ಹಣ ಹೆಚ್ಚುವರಿಯಾಗಿ ಬೇಕಾಗಿದೆ ಎಂಬ ಬಗ್ಗೆ ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸುವುದು. SCSP/TSP ಅನುದಾನದಿಂದ ಬಸ್ ಶೆಲ್ಟರ್ ಮತ್ತು ಬಸ್ ನಿಲ್ದಾಣಗಳನ್ನು ನಿರ್ಮಿಸಲು ಈ ವರ್ಷ ಉಪಯೋಗಿಸಬೇಕಾಗಿಲ್ಲ. ಸದರಿ ಪ್ರಸ್ತಾವನೆಯೊಂದಿಗೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿ ಮುಂದಿನ ಕ್ರಮ ತೆಗೆದುಕೊಳ್ಳುವುದು. (ತಕ್ಷಣವೇ ಈ ಬಗ್ಗೆ ಕಡತವನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಆರ್ಥಿಕ ಇಲಾಖೆಗೆ ಸಲ್ಲಿಸುವುದು)

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ)**

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

## 7. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಆರ್.ಡಿ.ಪಿ.ಆರ್ ಇಲಾಖೆಯ ಬಗ್ಗೆ ವಿಷಯಸೂಚಿಯಲ್ಲಿ ಇರುವ ವಿಷಯಗಳ ಬಗ್ಗೆ ವಿವರಿಸಲಾಯಿತು. ತುಂಗಭದ್ರಾ ಅಣೆಕಟ್ಟಿನ ಹಿನ್ನೀರಿನಿಂದ ಕುಡಿಯುವ ನೀರಿನ ಯೋಜನೆ ಬಗ್ಗೆ ಶ್ರೀ. ಆರ್. ಧ್ರುವನಾರಾಯಣ್, ಮಾನ್ಯ ಲೋಕಸಭಾ ಸದಸ್ಯರು ಮಾತನಾಡಿ, ಕುಡಿಯುವ ನೀರು ಒದಗಿಸುವುದು ಸಾಮಾನ್ಯ ಕಾರ್ಯಕ್ರಮವಾಗಿರುವುದರಿಂದ **SCSP/TSP** ಅನುದಾನ ನೀಡುವ ಅವಶ್ಯಕತೆ ಏನಿದೆ ಎಂದು ಪ್ರಶ್ನಿಸಿದರು.

ಕುಡಿಯುವ ನೀರಿನ ಯೋಜನೆಗಳಲ್ಲಿ **SCSP/TSP** ಅನುದಾನ ಒದಗಿಸಲಾಗುತ್ತಿದ್ದು, ಸದರಿ ಯೋಜನಾ ವೆಚ್ಚದಲ್ಲಿ ಪ.ಜಾತಿ / ಪ.ಪಂಗಡ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ತಪ್ಪದೆ ಒದಗಿಸಲು ಮತ್ತು ಒಟ್ಟು ಯೋಜನಾ ವೆಚ್ಚದಲ್ಲಿ ಪ.ಜಾತಿ / ಪ.ಪಂಗಡ ಜನಸಂಖ್ಯೆ ಅನುಪಾತದಲ್ಲಿ ಭಾಗಶಃ ಅನುದಾನ ನೀಡಲಾಗುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಶ್ರೀ. ಕೆ.ಎನ್. ರಾಜಣ್ಣ, ಮಾನ್ಯ ವಿಧಾನಸಭಾ ಸದಸ್ಯರು ಮಾತನಾಡಿ, ಪಾವಗಡ, ಚಳ್ಳಕೆರೆ, ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ.ಜಾತಿ / ಪ.ಪಂಗಡ ಜನರು ಇರುವುದರಿಂದ ತುಂಗಭದ್ರಾ ಅಣೆಕಟ್ಟು ಹಿನ್ನೀರಿನಿಂದ ತೆಗೆದುಕೊಳ್ಳಲಾಗುತ್ತಿರುವ ಕುಡಿಯುವ ನೀರಿನ ಬೃಹತ್ ಯೋಜನೆಗೆ ಭಾಗಶಃ ಅನುದಾನವನ್ನು ನೀಡಬಹುದೆಂದು ಅಭಿಪ್ರಾಯಪಟ್ಟರು. ಪ್ರಧಾನ ಕಾರ್ಯದರ್ಶಿಗಳು, ಆರ್.ಡಿ.ಪಿ.ಆರ್ ರವರು ಮಾತನಾಡಿ, ತುಂಗಭದ್ರಾ ಅಣೆಕಟ್ಟು ಹಿನ್ನೀರಿನ ಯೋಜನೆಗೆ **SCSP/TSP** ಅನುದಾನದ ಜೊತೆಗೆ ಇಲಾಖೆಯಿಂದ ಬೇರೆ ಅನುದಾನವನ್ನು ಸಹ ಉಪಯೋಗಿಸಲಾಗುವುದೆಂದು ತಿಳಿಸುತ್ತಾ, ಪಿ.ಎಂ.ಜಿ.ಎಸ್.ವೈ ಯೋಜನೆಯಡಿಯಲ್ಲಿ ನೀಡಿದ ರೂ.189.87 ಕೋಟಿಗಳ ಅನುದಾನದಲ್ಲಿ ಶೇ.50 ರಷ್ಟು ಅನುದಾನವನ್ನು ಸ್ವಚ್ಛ ಭಾರತ ಯೋಜನೆಗೆ ನೀಡಲು ಪ್ರಸ್ತಾಪಿಸಿದರು.

ವಿಷಯಸೂಚಿಯಲ್ಲಿ ತಿಳಿಸಿರುವಂತೆ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿರುವುದರಿಂದ ಉಳಿಕೆ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳಿಗೆ ಉಪಯೋಗಿಸುವುದು ಸೂಕ್ತವಾಗುತ್ತದೆ ಎಂದು ಭಾವಿಸಿ, ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

1. ತುಂಗಭದ್ರಾ ಅಣೆಕಟ್ಟು ಹಿನ್ನೀರಿನಿಂದ ಪಾವಗಡ, ಚಳ್ಳಕೆರೆ, ಮೊಳಕಾಲ್ಮೂರು ಮೀಸಲು ವಿಧಾನಸಭಾ ಕ್ಷೇತ್ರಗಳಿಗೆ ಕುಡಿಯುವ ನೀರಿನ ಯೋಜನೆಗೆ (ಪೂರ್ಣಗೊಳಿಸಲು ಸುಮಾರು 4 ರಿಂದ 5 ವರ್ಷಗಳು ಬೇಕಾಗಿದೆ) ತಗಲುವ ವೆಚ್ಚದಲ್ಲಿ ಶೇ.50 ರಷ್ಟು ಆರ್.ಡಿ.ಪಿ.ಆರ್ ಇಲಾಖೆಗೆ ನೀಡಿದ **SCSP/TSP** ಅನುದಾನದಲ್ಲಿ ಹಂತ ಹಂತವಾಗಿ ಭರಿಸಲು ಅನುಮೋದನೆ ನೀಡಲಾಗಿದೆ.
2. ಪ.ಜಾತಿ / ಪ.ಪಂಗಡ ಕುಟುಂಬಗಳಿಗೆ ಶೌಚಾಲಯ ಮತ್ತು ಸ್ನಾನಗೃಹ ನಿರ್ಮಾಣ ಮಾಡಲು ಘಟಕ ವೆಚ್ಚ : ರೂ.20,000/- (ಶೌಚಾಲಯ ಘಟಕ ವೆಚ್ಚ : ರೂ.15,000/- ಮತ್ತು ಸ್ನಾನಗೃಹ : ರೂ.5,000/-) ಒಟ್ಟು ವೆಚ್ಚವನ್ನು **SCSP/TSP** ಸ್ವಚ್ಛ ಭಾರತ ಯೋಜನೆಯಲ್ಲಿ ಭರಿಸಲು ಅನುಮೋದನೆ ನೀಡಲಾಗಿದೆ.
3. ಪಿ.ಎಂ.ಜಿ.ಎಸ್.ವೈ ಯೋಜನೆಯಡಿಯಲ್ಲಿ ನೀಡಿದ ರೂ.189.87 ಕೋಟಿಗಳ ಅನುದಾನದಲ್ಲಿ ಶೇ.50 ರಷ್ಟು ಅನುದಾನವನ್ನು ಕುಡಿಯುವ ನೀರಿಗೆ ವಿನಿಯೋಗಿಸಲು ಅನುಮತಿ ನೀಡಿದೆ. (ತಕ್ಷಣವೇ ಈ ಬಗ್ಗೆ ಕಡತವನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಆರ್ಥಿಕ ಇಲಾಖೆಗೆ ಸಲ್ಲಿಸುವುದು)

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್ ಇಲಾಖೆ)**

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

## ೮. ಅರಣ್ಯ ಇಲಾಖೆ

ಅರಣ್ಯ ಇಲಾಖೆಯಿಂದ ಎಲ್.ಪಿ.ಜಿ ಸಂಪರ್ಕಗಳನ್ನು ನೀಡುವ ಕುರಿತು ಶ್ರೀ. ಧ್ರುವನಾರಾಯಣ್, ಮಾನ್ಯ ಲೋಕಸಭಾ ಸದಸ್ಯರು ಮತ್ತು ಶ್ರೀ. ರಾಜಣ್ಣ, ಮಾನ್ಯ ವಿಧಾನಸಭಾ ಸದಸ್ಯರು ಮಾತನಾಡಿ, ಇದು ಒಳ್ಳೆಯ ಕಾರ್ಯಕ್ರಮ, ಇದಕ್ಕೆ ಹೆಚ್ಚಿನ ಅನುದಾನ ನೀಡಬೇಕೆಂದು ಪ್ರಸ್ತಾಪಿಸಿದರು. ಸಲಹೆಗಾರರು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 1,00,000 ಫಲಾನುಭವಿಗಳಿಗೆ ಎಲ್.ಪಿ.ಜಿ ಸಂಪರ್ಕ ನೀಡಲು ಆಯವ್ಯಯದಲ್ಲಿ ಕ್ರಮ ಜರುಗಿಸಲಾಗುತ್ತದೆ ಎಂದು ತಿಳಿಸಿದರು.

ಅರಣ್ಯ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಅರಣ್ಯದಲ್ಲಿ / ಅರಣ್ಯ ಅಂಚಿನ ಗ್ರಾಮಗಳಲ್ಲಿರುವ ಪ.ಜಾತಿ / ಪ.ಪಂಗಡದ ಕುಟುಂಬಗಳಿಗೆ ಎಲ್.ಪಿ.ಜಿ ಸಂಪರ್ಕ ಮತ್ತು ನಾಲ್ಕು ಸಿಲಿಂಡರ್‌ಗಳನ್ನು ಸರಬರಾಜು ಮಾಡುವುದು

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ)**

## ೯. ಸಹಕಾರ ಇಲಾಖೆ

ಸಹಕಾರ ಇಲಾಖೆಗೆ ಸಂಬಂಧಿಸಿದಂತೆ, ಶ್ರೀ. ಕಾಗೋಡು ತಿಮ್ಮಪ್ಪ, ಮಾನ್ಯ ಕಂದಾಯ ಸಚಿವರು ಮಾತನಾಡಿ, ಎಲ್ಲಾ ಸಹಕಾರ ಸಂಘಗಳಲ್ಲಿ ಪ.ಜಾತಿ / ಪ.ಪಂಗಡ ಜನರನ್ನು ಸದಸ್ಯರನ್ನಾಗಿ ಮಾಡಬೇಕೆಂದು ಒತ್ತಾಯಿಸಿದರು ಮತ್ತು ಸದಸ್ಯತ್ವಕ್ಕೆ ತಗಲುವ ವೆಚ್ಚವನ್ನು ಸರ್ಕಾರದಿಂದ ಭರಿಸಬೇಕಾಗಿದೆ.

ಸಹಕಾರ ಸಂಘಗಳ ನಿಬಂಧಕರು ವಿವರಿಸುತ್ತಾ ಈಗಾಗಲೇ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ ಮತ್ತು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು ಸೇರಿಸಲಾಗುವುದೆಂದು ತಿಳಿಸಿದರು.

ಶ್ರೀ. ಕೆ.ಎನ್. ರಾಜಣ್ಣ, ಮಾನ್ಯ ವಿಧಾನಸಭಾ ಸದಸ್ಯರು ಮಾತನಾಡಿ, ಯಶಸ್ವಿನಿ ಯೋಜನೆಯು ಒಳ್ಳೆಯ ಯೋಜನೆಯಾಗಿದ್ದು, ಈಗಿರುವ ರೀತಿಯಲ್ಲಿಯೇ ಅನುಷ್ಠಾನಗೊಳಿಸಲು ಮತ್ತು ಸದಸ್ಯತ್ವ ಶುಲ್ಕವನ್ನು ಭರಿಸಲು ಅನುದಾನವನ್ನು ಸಹಕಾರ ಇಲಾಖೆಗೆ ನೀಡಲಾಗುತ್ತಿದ್ದು, ಆರೋಗ್ಯ ಇಲಾಖೆ ರವರು ಸಹಕಾರ ಇಲಾಖೆಯ ಸಮನ್ವಯದೊಂದಿಗೆ ಅನುಷ್ಠಾನಗೊಳಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಿದರು.

ಸಹಕಾರ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ರೂ.50,000/- ಸಾಲವನ್ನು ಸಹಕಾರಿ ಬ್ಯಾಂಕುಗಳ ಮೂಲಕ ಪಶು ಆಹಾರ ಮತ್ತು ನಿರ್ವಹಣೆಗಾಗಿ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗುವುದು.

2. ದಾವಣಗೆರೆ ಕೃಷಿ ಉತ್ಪಾದನೆ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿ ಲಭ್ಯವಿರುವ ಜಮೀನಿನಲ್ಲಿ ಪ.ಜಾತಿ / ಪ.ಪಂಗಡ ಹಮಾಲರಿಗೆ ಮನೆಗಳ ನಿರ್ಮಾಣ ಮಾಡಲಾಗುವುದು.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರು ಹಮಾಲಿ ಮನೆಗಳ ಬಗ್ಗೆ ಪ್ರಸ್ಥಾಪಿಸಿ ಬಂಡವಾಳ ಅನುದಾನದಿಂದ ಮನೆಗಳನ್ನು ನಿರ್ಮಿಸಿದಲ್ಲಿ ಅದರ ಮಾಲೀಕತ್ವ ಸರ್ಕಾರದಲ್ಲಿಯೇ ಇರಬೇಕಾಗುತ್ತದೆ ಎಂದು ಹೇಳಿದರು.

ಪ.ಜಾತಿ / ಪ.ಪಂಗಡ ಸಹಕಾರ ಸಂಘಗಳಿಗೆ ಷೇರು ಬಂಡವಾಳ ನೀಡಲಾಗುವುದು

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ)**

## 10. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಶ್ರೀ. ಕೆ.ಎನ್. ರಾಜಣ್ಣ, ಮಾನ್ಯ ವಿಧಾನಸಭಾ ಸದಸ್ಯರು ಮಾತನಾಡಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸಹ ಭೋಜನ ವೆಚ್ಚವನ್ನು ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಿಗೆ ನೀಡುವ ದರವನ್ನು ನೀಡಲು ಪ್ರಸ್ತಾಪಿಸಿದರು. ಕಾರ್ಯದರ್ಶಿಗಳು, ಹಿಂ.ವ ಕಲ್ಯಾಣ ಇಲಾಖೆರವರು ಮಾತನಾಡಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಸಹ ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಂತೆ ಮಾಸಿಕ ಭೋಜನ ವೆಚ್ಚ ರೂ.1500/- ನೀಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತನಾಡಿ, ಹಿಂದುಳಿದ ವರ್ಗಗಳ ವಸತಿ ಶಾಲೆಗಳಿಗೂ ಸಹ ಕಟ್ಟಡ ನಿರ್ಮಿಸಲು ಹೆಚ್ಚಿನ ಅನುದಾನ ನೀಡಬೇಕೆಂದು ಪ್ರಸ್ತಾಪಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಈ ವರ್ಷ ಹಿಂದುಳಿದ ವರ್ಗಗಳ ವಸತಿ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದೆ ಎಂದು ಹೇಳಿದರು. ಬಂಡವಾಳ ಲೆಕ್ಕ ಶೀರ್ಷಿಕೆಯಡಿ ಇತರೆ ಇಲಾಖೆಗಳಲ್ಲಿ ಖರ್ಚಾಗದೆ ಇರುವ ಅನುದಾನವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ನೀಡುವ ಬಗ್ಗೆ ಮುಂದಿನ ತಿಂಗಳು ನಡೆಯುವ ನೋಡಲ್ ಏಜೆನ್ಸಿ ಸಭೆಯಲ್ಲಿ ಪರಿಶೀಲಿಸಲಾಗುವುದೆಂದು ತಿಳಿಸಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಸತಿ ನಿಲಯಗಳಲ್ಲಿ ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಮತ್ತು ವಸತಿ ಶಾಲೆ / ವಸತಿ ನಿಲಯಗಳ ಕಟ್ಟಡ ನಿರ್ಮಾಣ. ಆದರೆ ಕಡ್ಡಾಯವಾಗಿ ಶೇ.25 ರಷ್ಟು ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)**

## 11. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

SCSP / TSP ಸಲಹೆಗಾರರು ಮಾತನಾಡಿ, ಐ.ಸಿ.ಡಿ.ಎಸ್. ಯೋಜನೆಯಡಿ ಒಟ್ಟು ರೂ.697.73 ಕೋಟಿಗಳನ್ನು ಒದಗಿಸಲಾಗಿದ್ದು, ಈ ಪೈಕಿ ರೂ.419.00 ಕೋಟಿಗಳು ಉಳಿಕೆಯಾಗುವುದೆಂದು ಇಲಾಖೆಯವರು ತಿಳಿಸಿರುವುದರಿಂದ ಸದರಿ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಗೆ ಪ.ಜಾತಿ / ಪ.ಪಂಗಡದವರಿಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮರುಹಂಚಿಕೆ ಮಾಡಬಹುದೆಂದು ತಿಳಿಸಿದರು.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಆದರೆ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರು ಮಾತನಾಡಿ, ಇಲಾಖೆಯು "ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ" ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಷ್ಕರಿಸಿದ್ದು, ಅದರೊಂದಿಗೆ 3 ಹೊಸ ಕಾರ್ಯಕ್ರಮಗಳನ್ನು ಪರಿಗಣಿಸಿದಲ್ಲಿ, ಉಳಿತಾಯವಾಗುವ ಮೊತ್ತವು ರೂ.419.00ಕೋಟಿ ಬದಲಾಗಿ ರೂ.101.25 ಕೋಟಿ ಉಳಿತಾಯವಾಗಲಿದೆ ಎಂದು ತಿಳಿಸಿದರು. ಈ ಹಿನ್ನಲೆಯಲ್ಲಿ ಸಭೆಯು ವಿಸ್ತೃತ ಚರ್ಚೆ ನಡೆಸಿ "ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ" ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

| ಕ್ರ. ಸಂ | ಕಾರ್ಯಕ್ರಮಗಳ ವಿವರ | ಎಸ್‌ಸಿಎಸ್‌ಪಿ ರಡಿ ಅನುದಾನ (ರೂ.ಕೋಟಿ ಗಳಲ್ಲಿ) | ಟಿ.ಎಸ್.ಪಿ ರಡಿ ಅನುದಾನ (ರೂ.ಕೋಟಿ ಗಳಲ್ಲಿ) | ಒಟ್ಟು ಅನುದಾನ (ರೂ.ಕೋಟಿ ಗಳಲ್ಲಿ) |
|---|---|---|---|---|
| 1 | ಪೂರಕ ಪೌಷ್ಠಿಕ ಆಹಾರ ಯೋಜನೆಯಡಿ 6 ತಿಂಗಳು- 6ವರ್ಷದ ಮಕ್ಕಳಿಗೆ- ಪ್ರತಿ ಫಲಾನುಭವಿಗೆ ರೂ.6ರಂತೆ | 156.04 | 68.43 | 224.43 |
| 2 | ಪೂರಕ ಪೌಷ್ಠಿಕ ಆಹಾರ ಯೋಜನೆಯಡಿ ಕಿಶೋರಿಯರಿಗೆ - ಪ್ರತಿ ಫಲಾನುಭವಿಗೆ ರೂ.7ರಂತೆ | 12.10 | 3.59 | 15.69 |
| 3 | ಪೂರಕ ಪೌಷ್ಠಿಕ ಆಹಾರ ಯೋಜನೆಯಡಿ 6 ತಿಂಗಳು- 6ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ- ಪ್ರತಿ ಫಲಾನುಭವಿಗೆ ರೂ.9ರಂತೆ | 0.89 | 0.36 | 1.19 |
| 4 | ಕ್ಷೀರ ಭಾಗ್ಯ ಯೋಜನೆಯಡಿ 6 ತಿಂ- 6ವರ್ಷದ ಮಕ್ಕಳಿಗೆ ಹಾಲು ನೀಡಲು (ಏಪ್ರಿಲ್ 2017ರಿಂದ ಜೂನ್ 2017ರವರೆಗೆ- ವಾರದಲ್ಲಿ 3 ದಿನ) | 13.67 | 5.99 | 19.66 |
| 5 | ಕ್ಷೀರ ಭಾಗ್ಯ ಯೋಜನೆಯಡಿ 6 ತಿಂ- 6ವರ್ಷದ ಮಕ್ಕಳಿಗೆ ಹಾಲು ನೀಡಲು (ಜುಲೈ 2017ರಿಂದ - ವಾರದಲ್ಲಿ 5 ದಿನ) | 68.34 | 29.97 | 98.31 |
| 6 | ಪೂರಕ ಪೌಷ್ಠಿಕ ಆಹಾರ ಯೋಜನೆಯಡಿ ಗರ್ಭಿಣಿ, ಬಾಣಂತಿ, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕರಿಗೆ – ರೂ.7ರಂತೆ (ಏಪ್ರಿಲ್ 2017ರಿಂದ ಸೆಪ್ಟೆಂಬರ್ 2017ರವರೆಗೆ- ವಾರದಲ್ಲಿ 6ದಿನ) | 27.80 | 12.16 | 39.96 |
| 7 | ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ, ಬಾಣಂತಿ, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕರಿಗೆ – ರೂ.21ರಂತೆ (ಅಕ್ಟೋಬರ್ 2017ರಿಂದ ಮಾರ್ಚ್2018ರವರೆಗೆ- ವಾರದಲ್ಲಿ 6ದಿನ) | 83.41 | 36.49 | 119.90 |
| 8 | 3 ವರ್ಷ- 6 ವರ್ಷದ ಮಕ್ಕಳಿಗೆ ಮೊಟ್ಟೆ ವಿತರಿಸಲು- ಪ್ರತೀ ಫಲಾನುಭವಿಗೆ ರೂ.5ರಂತೆ (ಜೂನ್2017 ರಿಂದ ಮಾರ್ಚ್2018ರವರೆಗೆ- ವಾರದಲ್ಲಿ 2 ದಿನ) | 15.26 | 6.78 | 22.04 |

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

| | | | | |
|---|---|---|---|---|
| 9 | ನಗರ ಪ್ರದೇಶಗಳ ಕೊಳಚೆ ಪ್ರದೇಶಗಳಲ್ಲಿ 100 ಅಂಗನವಾಡಿ ಕೇಂದ್ರ ಪ್ರಾರಂಭಿಸಲು ಸೌಲಭ್ಯಗಳನ್ನು ನೀಡಲು (ಪ್ರತಿ ಅಂಗನವಾಡಿ ಕೇಂದ್ರಕ್ಕೆ ರೂ.3.07 ಲಕ್ಷದಂತೆ) | 3.07 | - | 3.07 |
| | **ಒಟ್ಟು** | **380.58** | **163.77** | **544.35** |
| | **ಉಳಿಕೆಯಾಗುವ ಮೊತ್ತ** | **115.91** | **37.47** | **153.38** |

ಮೇಲ್ಕಂಡ ತಃಖ್ತೆಯ ಕ್ರಮ ಸಂಖ್ಯೆ 9ರ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಯೋಜನೆ ಇಲಾಖೆ ಹಾಗೂ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಸೂಚಿಸಲಾಯಿತು. ಮುಂದುವರೆದು, "ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ" ಉಳಿತಾಯವಾಗುವ ಒಟ್ಟು ರೂ.153.38 ಕೋಟಿಗಳನ್ನು (ಪ.ಜಾ.ಉ.ಯೋ-115.91ಕೋಟಿ,ಗಿ.ಉ.ಯೋ-37.47ಕೋಟಿ) ಅಧ್ಯರ್ಪಣೆ ಮಾಡಲು ಸೂಚಿಸಲಾಯಿತು.

ನಿವೇಶನ ರಹಿತ 11,500 ದೇವದಾಸಿಯರಿಗೆ ನಿವೇಶನ ಒದಗಿಸಲು ಸಹಾಯಧನ ನೀಡುವ ಇಲಾಖೆಯ ಪ್ರಸ್ತಾವನೆಗೆ ಪ್ರಸ್ತುತ "ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ" ಉಳಿತಾಯವಾಗುವ ಅನುದಾನ ಬಳಸಲು ಸಾಧ್ಯವಾಗದ ಹಿನ್ನಲೆಯಲ್ಲಿ, ಮುಂದಿನ ದಿನಗಳಲ್ಲಿ ಇತರೆ ಇಲಾಖೆಗಳಿಂದ ಅಧ್ಯರ್ಪಣೆಗೊಂಡು ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ನಿರ್ಧಾರ ಕೈಗೊಳ್ಳಲು ತೀರ್ಮಾನಿಸಲಾಯಿತು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)**

## 12. ವಾರ್ತಾ ಇಲಾಖೆ

ವಾರ್ತಾ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಪರಿಶೀಲಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ಜನ ಸಂಪರ್ಕ ಮತ್ತು ಕ್ಷೇತ್ರ ಪ್ರಚಾರ ಯೋಜನೆಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ಪ್ರಚಾರ ಮಾಡಲಾಗುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ವಾರ್ತಾ ಇಲಾಖೆ)**

## 13. ಪ್ರವಾಸೋದ್ಯಮ ಇಲಾಖೆ

ಪ್ರವಾಸೋದ್ಯಮ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಪ್ರವಾಸಿ ಟ್ಯಾಕ್ಸಿಗಳ ಸಹಾಯಧನವನ್ನು ರೂ.2.00 ಲಕ್ಷಗಳಿಂದ ರೂ.3.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.
2. ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಕಾರ್ಯಕ್ರಮ.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ)**

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

## 14. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸದರಿ ಇಲಾಖೆಗಳ ಪ್ರಸ್ತಾವನೆಗಳನ್ನು ಪರಿಶೀಲಿಸಿ, 2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ)**

## 15. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ

ಸದರಿ ಇಲಾಖೆಗೆ ನೀಡಿದ ಅನುದಾನವನ್ನು ಅನ್ನಭಾಗ್ಯ ಕಾರ್ಯಕ್ರಮಕ್ಕೆ ಸಹಾಯಧನ ನೀಡಲು ಉಪಯೋಗಿಸಲಾಗುವುದೆಂದು ತಿಳಿಸಿದರು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ)**

## 16. ಕಂದಾಯ ಇಲಾಖೆ

SCSP / TSP ಸಲಹೆಗಾರು ಮಾತನಾಡಿ, ಕಂದಾಯ ಇಲಾಖೆಯ ಮಾಹಿತಿಯಂತೆ ಅಂಗವಿಕಲರು / ಸಂಧ್ಯಾ ಸುರಕ್ಷಾ / ವೃದ್ಧಾಪ್ಯ / ವಿಧವಾ ಮಾಸಿಕ ಪಿಂಚಣಿ ಕಾರ್ಯಕ್ರಮಗಳಲ್ಲಿ SCSP ರಡಿ ರೂ.676.00 ಕೋಟಿಗಳು ಮತ್ತು TSP ರಡಿ ರೂ.17.00 ಕೋಟಿಗಳು ಉಳಿಕೆಯಾಗುತ್ತದೆ ಎಂದು ತಿಳಿಸಿ, ಸದರಿ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಗೆ ನೀಡಲು ಅಥವಾ ಪಿಂಚಣಿಯನ್ನು ಹೆಚ್ಚಿಸಲು ಪ್ರಸ್ಥಾಪಿಸಿದರು.

ಈ ಬಗ್ಗೆ ಚರ್ಚಿಸಿ, ಮಾಸಿಕ ಪಿಂಚಣಿ ಈಗಿರುವಂತೆ ಮುಂದುವರೆಸಿ ಉಳಿಕೆಯಾಗುವ ಅನುದಾನದ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಪ್ರಸ್ತಾವನೆಯನ್ನು ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸಲು ತೀರ್ಮಾನಿಸಲಾಯಿತು.

ಕಂದಾಯ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಆರಾಧನಾ ಯೋಜನೆಯಡಿಯಲ್ಲಿ SCSP / TSP ಅಡಿಯಲ್ಲಿ ನೀಡಿದ ಒಟ್ಟು ರೂ.23.00 ಕೋಟಿಗಳನ್ನು ಪ.ಜಾತಿ / ಪ.ಪಂಗಡ ಜನಸಂಖ್ಯೆ ಆಧಾರದ ಮೇಲೆ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಲಾಗುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ)**

## 17. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ

ಐ.ಟಿ. & ಬಿ.ಟಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಪ.ಜಾತಿ/ಪ.ಪಂಗಡದ ನಿರುದ್ಯೋಗಿ ಯುವಕ / ಯುವತಿಯರಿಗೆ ಹೋಬಳಿ / ಪಟ್ಟಣ ಪಂಚಾಯಿತಿ ಮಟ್ಟದಲ್ಲಿ ಸೇವಾ ಕೇಂದ್ರ ಸ್ಥಾಪಿಸಲು ರೂ.50,000/-

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಸಹಾಯಧನ (ಒಟ್ಟು ಅನುದಾನದಲ್ಲಿ ಶೇ.50 ರಷ್ಟು ಮಾತ್ರ ಈ ಕಾರ್ಯಕ್ರಮಕ್ಕೆ ಉಪಯೋಗಿಸುವುದು).

2. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಎಲೆಕ್ಟ್ರಾನಿಕ್ಸ್, ಅನಿಮೇಷನ್ ಮತ್ತು ಇತರೆ ವೃತ್ತಿಪರ ಕೋರ್ಸ್‌ಗಳಲ್ಲಿ ಡಿಪ್ಲೊಮ / ಪದವೀಧರರಿಗೆ "ಯುವ ಯುಗ" ಎಂಬ ಕಾರ್ಯಕ್ರಮದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು. (ಒಟ್ಟು ಅನುದಾನದಲ್ಲಿ ಶೇ.50 ರಷ್ಟು ಮಾತ್ರ ಈ ಕಾರ್ಯಕ್ರಮಕ್ಕೆ ಉಪಯೋಗಿಸುವುದು). ಐ.ಟಿ & ಬಿ.ಟಿ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಉದ್ಯೋಗ ದೊರಕುವ ರೀತಿಯಲ್ಲಿ ತರಬೇತಿ ನೀಡುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ)**

## 18. <u>ವಸತಿ ಇಲಾಖೆ</u>

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಹಿಂದಿನ ವರ್ಷ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ನಿವೇಶನಕ್ಕಾಗಿ ಅನುದಾನ ನೀಡಿದ್ದರೂ ಸಹ ಈವರೆವಿಗೂ ನಿವೇಶನಗಳನ್ನು ಖರೀದಿಸಿರುವುದಿಲ್ಲ ಮತ್ತು ಈ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ನೀಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶ್ರೀ. ಧ್ರುವನಾರಾಯಣ್, ಮಾನ್ಯ ಲೋಕಸಭಾ ಸದಸ್ಯರು ಮಾತನಾಡಿ, ಬಹಳಷ್ಟು ಪ.ಜಾತಿ / ಪ.ಪಂಗಡದವರಿಗೆ ನಿವೇಶನಗಳು ಇಲ್ಲದಿರುವ ಕಾರಣ ಹೆಚ್ಚಿನ ನಿವೇಶನಗಳನ್ನು ಒದಗಿಸಲು ಕ್ರಮ ವಹಿಸಬೇಕೆಂದು ಕೋರಿದರು. ಸರ್ಕಾರಿ ಜಮೀನುಗಳಿಲ್ಲದ ಕಡೆ ಖಾಸಗಿ ಜಮೀನುಗಳನ್ನು ಖರೀದಿಸಿ ಬಡಾವಣೆ ನಿರ್ಮಿಸುವುದು ಅವಶ್ಯಕತೆ ಇದೆ ಎಂದು ತಿಳಿಸಿದರು.

ಮಾನ್ಯ ಕಂದಾಯ ಸಚಿವರು ಮಾತನಾಡಿ, ಮಾರ್ಗದರ್ಶಿ ಬೆಲೆಗೆ ಜಮೀನು ಸಿಗುವುದು ಸಾಧ್ಯವಿಲ್ಲ, ಇದನ್ನು ಹೆಚ್ಚಿಸಬೇಕೆಂದು ಹೇಳಿದರು.

ಈಗಾಗಲೇ ವಸತಿ ಇಲಾಖೆಯಿಂದ ನಿವೇಶನ ನೀಡುವ ಸಲುವಾಗಿ ಖಾಸಗಿ ಜಮೀನು ಖರೀದಿ ಮಾಡಲು ಮಾರ್ಗದರ್ಶಿ ಬೆಲೆಗಿಂತ ನಾಲ್ಕು ಪಟ್ಟು ಮೊತ್ತವನ್ನು ನೀಡಲು ಅವಕಾಶವಿದೆ. ಅದರಿಂದ ನಿವೇಶನಗಳನ್ನು ಖರೀದಿಸಿ ಒದಗಿಸಬಹುದು ಎಂದು ಸಭೆಯಲ್ಲಿ ತಿಳಿಸಲಾಯಿತು.

ಶ್ರೀಮತಿ ರತ್ನಪ್ರಭಾ, ಅಪರ ಮುಖ್ಯ ಕಾರ್ಯದರ್ಶಿಗಳು ಮಾತನಾಡಿ, ವಸತಿರಹಿತ ದೇವದಾಸಿಯರಿಗೆ ಮನೆಗಳನ್ನು ಹಂಚಿಕೆ ಮಾಡುವ ಬಗ್ಗೆ ಕೋರಿದರು.

ಪ್ರಧಾನ ಕಾರ್ಯದರ್ಶಿಗಳು, ವಸತಿ ಇಲಾಖೆ ರವರು ಮಾತನಾಡಿ, ಪ್ರಸ್ತುತ ಪ.ಜಾತಿ / ಪ.ಪಂಗಡ ಜನರಿಗೆ on demand ನಲ್ಲಿ ಮನೆಗಳನ್ನು ನೀಡಲಾಗುತ್ತಿರುವುದರಿಂದ ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ಬೇಡಿಕೆ ಅನುಸಾರ ಮನೆಗಳನ್ನು ನೀಡಲಾಗುವುದೆಂದು ತಿಳಿಸಿದರು.
ವಸತಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಪ.ಜಾತಿ / ಪ.ಪಂಗಡ ಜನರಿಗೆ ಮನೆಗಳ ಘಟಕವೆಚ್ಚ ಗ್ರಾಮೀಣ ಪ್ರದೇಶದವರಿಗೆ ರೂ.1.75 ಲಕ್ಷ, ನಗರ ಪ್ರದೇಶದವರಿಗೆ ರೂ.2.00 ಲಕ್ಷ ಎಂದು ನಿರ್ಧರಿಸಿ, ಈಗಾಗಲೇ ಮಂಜೂರಾತಿಯಾಗಿ ಪ್ರಾರಂಭಗೊಳ್ಳದೇ ಇರುವ ಫಲಾನುಭವಿಗಳಿಗೆ ಮತ್ತು ಮನೆಗಳ ನಿರ್ಮಾಣ

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಪ್ರಾರಂಭವಾಗಿ ಪ್ರಗತಿಯಲ್ಲಿರುವ ಮತ್ತು ಹೊಸ ಮಂಜೂರಾತಿಗಳಿಗೆ ಅನ್ವಯಿಸುವಂತೆ ಕೋರಿದರು. ಆದರೆ, ಸದರಿ ಪರಿಷ್ಕೃತ ದರವನ್ನು ಇನ್ನು ಮುಂದೆ ನೀಡಲಾಗುವ ಕಾರ್ಯಾದೇಶಗಳಿಗೆ ಮಾತ್ರ ಅನ್ವಯಿಸುವ ಷರತ್ತಿನೊಂದಿಗೆ ಅನುಮೋದಿಸಲಾಯಿತು.

2. ಪ.ಜಾತಿ & ಪ.ಪಂಗಡದ ಅಲೆಮಾರಿ / ಸೂಕ್ಷ್ಮ / ಅತೀ ಸೂಕ್ಷ್ಮವೆಂದು ಗುರುತಿಸಿದ ಸಮುದಾಯಗಳಿಗೆ ಈ ಯೋಜನೆಯಡಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಡಾ॥ ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ಸಹಾಯಧನ ನೀಡುವುದು. ಅದರೊಂದಿಗೆ ಅಷ್ಟೇ ಮೊತ್ತವನ್ನು (ರೂ.1.75 ಲಕ್ಷ / ರೂ.2.00 ಲಕ್ಷ) ಸಮಾಜ ಕಲ್ಯಾಣ ಇಲಾಖೆಯಿಂದ ಹೆಚ್ಚುವರಿಯಾಗಿ ನೀಡುವುದು.

3. ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಸಫಾಯಿ ಕರ್ಮಚಾರಿಗಳಿಗೂ ಸಹ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಡಾ॥ ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ಸಹಾಯಧನವನ್ನು ನೀಡುವುದು. ಅದರೊಂದಿಗೆ ಅಷ್ಟೇ ಮೊತ್ತವನ್ನು (ರೂ.1.75 ಲಕ್ಷ / ರೂ.2.00 ಲಕ್ಷ) ನಗರ ಪ್ರದೇಶದಲ್ಲಿ ನಗರಾಭಿವೃದ್ಧಿ ಇಲಾಖೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ನೀಡುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ)**

## 19. ಉನ್ನತ ಶಿಕ್ಷಣ ಇಲಾಖೆ

ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತನಾಡಿ, 2017-18ನೇ ಸಾಲಿನ ಆಯವ್ಯಯದಲ್ಲಿ 10 Model First Grade Residential Colleges ಗಳನ್ನು ಪ.ಜಾತಿ / ಪ.ಪಂಗಡದವರಿಗೆ ಪ್ರಾರಂಭಿಸಲು ಘೋಷಿಸಿರುವುದರಿಂದ ಅವುಗಳನ್ನು ಸ್ಥಾಪಿಸಲು ಈ ವರ್ಷ ವೆಚ್ಚವಾಗದೆ ಇರುವ ಲೆಕ್ಕಶೀರ್ಷಿಕೆಯಡಿ ಒದಗಿಸಿದ ಅನುದಾನ ಉಪಯೋಗಿಸಲು ಪರಿಷತ್ತಿನ ಅನುಮೋದನೆಯನ್ನು ಕೋರಿದರು.

ಮುಂದುವರೆದು, ತಾಂತ್ರಿಕ ಶಿಕ್ಷಣದ ಗುಣಮಟ್ಟ ಸುಧಾರಣೆ ಕಾರ್ಯಕ್ರಮ ಮುಕ್ತಾಯಗೊಂಡಿರುವುದರಿಂದ ಅದಕ್ಕೆ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ರೂ.18.18 ಕೋಟಿಗಳನ್ನು 9 ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಹಾಸ್ಟೆಲ್ ನಿರ್ಮಾಣಕ್ಕಾಗಿ ಉಪಯೋಗಿಸಲು ಸಹಮತಿ ಕೋರಿದರು.

ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಬೇರೆ ಲೆಕ್ಕ ಶೀರ್ಷಿಕೆಗಳಡಿ ಲಭ್ಯವಿರುವ ಅನುದಾನದಲ್ಲಿ ಒದಗಿಸಲಾಗುವುದೆಂದು ಸಹ ತಿಳಿಸಿದರು.

ಹಿಂದಿನ ವರ್ಷ ಲ್ಯಾಪ್‌ಟಾಪ್‌ಗಳನ್ನು ನೀಡುವ ಯೋಜನೆಯಲ್ಲಿ ಸುಮಾರು ರೂ.36.00 ಕೋಟಿ ಉಳಿಕೆಯಾಗಿದ್ದು, ಸದರಿ ಮೊತ್ತವನ್ನು ಆಯವ್ಯಯದಲ್ಲಿ ಘೋಷಿಸಿರುವ 10 ಕಾಲೇಜುಗಳನ್ನು ಪ್ರಾರಂಭಿಸುವುದಕ್ಕಾಗಿ ಉಪಯೋಗಿಸಲು ಕೋರಿದರು. ಮಾನ್ಯ ಸಚಿವರ ಕೋರಿಕೆಯಂತೆ ಮೇಲ್ಕಂಡ ರೀತಿಯಲ್ಲಿ ಅನುದಾನವನ್ನು ಉಪಯೋಗಿಸಲು ಸಹಮತಿ ನೀಡಲಾಗಿದೆ. ಆದರೆ ಈ 10 ಕಾಲೇಜುಗಳಿಗೆ SCSP / TSP ಅನುದಾನ ಉಪಯೋಗಿಸಲಾಗುತ್ತಿರುವುದರಿಂದ ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಿಗೆ ಕನಿಷ್ಠ 60 ಪ್ರತಿಶತ ಪ್ರವೇಶವನ್ನು ನೀಡುವ ಷರತ್ತಿಗೊಳಪಟ್ಟು ಪ್ರಸ್ತಾವನೆಗಳನ್ನು ಒಪ್ಪಲಾಗಿದೆ.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಮೇಲ್ಕಂಡಂತೆ ಪ್ರಸ್ತಾಪಿಸಿದ ಅಂಶಗಳೊಂದಿಗೆ ಮತ್ತು ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಸಹ ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಪ.ಜಾತಿ / ಪ.ಪಂಗಡ ಪಿ.ಹೆಚ್.ಡಿ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾಸಿಕ ರೂ.8,000/- ವಿದ್ಯಾರ್ಥಿವೇತನ ಮತ್ತು ಲ್ಯಾಪ್‌ಟಾಪ್‌ಗಳನ್ನು ನೀಡಲು ಹಾಗೂ ವಸತಿ ನಿಲಯಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಳಿಗೆ ಇತರೆ ವಿಶ್ವವಿದ್ಯಾನಿಲಯಗಳಿಗೆ ಅನುದಾನ ನೀಡಿದಂತೆ, ರೂ.2.00 ಕೋಟಿಗಳನ್ನು ಉನ್ನತ ಶಿಕ್ಷಣ ಇಲಾಖೆಯಿಂದ ಒದಗಿಸುವುದು.

2. ಪದವಿ / ಸ್ನಾತಕೋತ್ತರ ಪದವಿ / ಪಿ.ಹೆಚ್.ಡಿ ಕೋರ್ಸ್‌ಗಳನ್ನು ಸರ್ಕಾರಿ ಕಾಲೇಜುಗಳಲ್ಲಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾತಿ / ಪ.ಪಂಗಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್‌ಗಳನ್ನು ಉಚಿತವಾಗಿ ನೀಡುವುದು. ಹಾಲಿ ಇರುವ ಕುಟುಂಬದ ವಾರ್ಷಿಕ ವರಮಾನ ಮಿತಿ ರೂ.2.50 ಲಕ್ಷಗಳಿಂದ ರೂ.5.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ)**

## ೨೦. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಮುಖ್ಯವಾಗಿ ಲಂಬಾಣಿ ಜನ ಮತ್ತು ಇತರೆ ಪ.ಜಾತಿ/ಪ.ಪಂಗಡದವರ ಶಾಲೆ ಬಿಟ್ಟ ಮಕ್ಕಳಿಗೆ ವಿಶೇಷ ಶಾಲೆ ವ್ಯವಸ್ಥೆ ಮಾಡುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ)**

## 21. ಕೈಮಗ್ಗ ಮತ್ತು ಜವಳಿ ಇಲಾಖೆ

ಕೈಮಗ್ಗ ಮತ್ತು ಜವಳಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಪರಿಶೀಲಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಪ.ಜಾತಿ/ಪ.ಪಂಗಡದ ನೇಕಾರರಿಗೆ - ವಸತಿ ಮತ್ತು ಕಾರ್ಯಾಗಾರ ನಿರ್ಮಾಣಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಘಟಕವೆಚ್ಚ ರೂ.2.50 ಲಕ್ಷದಿಂದ ರೂ.3.00 ಲಕ್ಷಕ್ಕೆ ಮತ್ತು ನಗರ ಪ್ರದೇಶದಲ್ಲಿ ರೂ.3.25 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಇದರಲ್ಲಿ ಸಹಾಯಧನ ರೂ.1.00 ಲಕ್ಷ ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಗ್ರಾಮೀಣ / ನಗರ ಪ್ರದೇಶದಲ್ಲಿನ ಮನೆಗಳಿಗೆ ಅನುಕ್ರಮವಾಗಿ ರೂ.1.75 ಲಕ್ಷ ಮತ್ತು ರೂ.2.00 ಲಕ್ಷಗಳನ್ನು ನೀಡುವುದು. ಫಲಾನುಭವಿಗಳ ವಂತಿಕೆ 10%.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

2. ಸಿದ್ಧ ಉಡುಪು ತಯಾರಿಸುವ ಘಟಕಗಳಿಗೆ ಗಾರ್ಮೆಂಟ್ ಪಾಲಿಸಿಯಂತೆ ಸಹಾಯಧನ ನೀಡಲಾಗುವುದು.

3. ಪ.ಜಾತಿ / ಪ.ಪಂಗಡ ವಸತಿ ನಿಲಯ / ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಜಮಖಾನ / ಹಾಸಿಗೆ / ಬೆಡ್‌ಶೀಟ್‌ಗಳನ್ನು ಸರಬರಾಜು ಮಾಡಲಾಗುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಕೈಮಗ್ಗ ಮತ್ತು ಜವಳಿ ಇಲಾಖೆ)**

## 22. ಭಾರಿ ಮತ್ತು ಮಧ್ಯಮ ಕೈಗಾರಿಕಾ ಇಲಾಖೆ

2017-18ನೇ ಸಾಲಿನಲ್ಲಿ ಸಂಸ್ಥೆಗಳಿಗಾಗಿ ಮೂಲಭೂತ ಸೌಕರ್ಯ ಕಾರ್ಯಕ್ರಮಕ್ಕೆ TSP ಯಡಿಯಲ್ಲಿ ರೂ.54.41 ಕೋಟಿಗಳು ಒದಗಿಸಿದ್ದು, ಈ ಪೈಕಿ ರೂ.17.45 ಕೋಟಿಗಳು ಉಳಿಕೆಯಾಗುವುದೆಂದು ಸದರಿ ಇಲಾಖೆಯು ತಿಳಿಸಿದ್ದು, ಈ ಉಳಿಕೆ ಅನುದಾನವನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ವರ್ಗಾಯಿಸಲು ಅನುಮತಿ ನೀಡಬೇಕೆಂದು ಸಮಾಜ ಕಲ್ಯಾಣ ಇಲಾಖೆಯಿಂದ ಕೋರಲಾಗಿದೆ.

ಭಾರಿ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಯ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಪ.ಜಾತಿ/ಪ.ಪಂಗಡದ ಕುಶಲಕರ್ಮಿಗಳಿಗೆ - ವಸತಿ ಮತ್ತು ಕಾರ್ಯಾಗಾರ ನಿರ್ಮಾಣಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಘಟಕವೆಚ್ಚ ರೂ. 2.50 ಲಕ್ಷದಿಂದ ರೂ.3.00 ಲಕ್ಷಕ್ಕೆ ಮತ್ತು ನಗರ ಪ್ರದೇಶದಲ್ಲಿ ರೂ.3.25 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಇದರಲ್ಲಿ ಸಹಾಯಧನ ರೂ. 1.00 ಲಕ್ಷ ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಗ್ರಾಮೀಣ / ನಗರ ಪ್ರದೇಶದಲ್ಲಿನ ಮನೆಗಳಿಗೆ ಅನುಕ್ರಮವಾಗಿ ರೂ.1.75 ಲಕ್ಷ ಮತ್ತು ರೂ.2.00 ಲಕ್ಷಗಳನ್ನು ನೀಡಲಾಗುವುದು. ಫಲಾನುಭವಿಗಳ ವಂತಿಕೆ 10%.
2. ಸಾಫ್ಟ್ ಸೀಡ್ ಕ್ಯಾಪಿಟಲ್ ಯೋಜನೆಯಡಿಯಲ್ಲಿ ಫಲಾನುಭವಿಗಳ ವಂತಿಕೆಯಲ್ಲಿ ಶೇ.50 ರಷ್ಟು ಮೊತ್ತವನ್ನು ಸಾಲ ರೂಪದಲ್ಲಿ ಶೂನ್ಯ ಬಡ್ಡಿ ದರದಲ್ಲಿ ನೀಡುವುದು.
3. ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿ ವತಿಯಿಂದ ಕೈಗಾರಿಕಾ ನಿವೇಶನ ಮತ್ತು ಶೆಡ್‌ಗಳಿಗೆ ಶೇ.50 ರಷ್ಟು ಸಹಾಯಧನ ನೀಡುವುದು.
4. ಪ.ಜಾತಿ / ಪ.ಪಂಗಡ ಉದ್ದಿಮೆದಾರರು ಹೊಸದಾಗಿ ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷ ಅವಧಿಗೆ ವಿದ್ಯುತ್ ಸರಬರಾಜಿನಲ್ಲಿ ಒಂದು ಯುನಿಟ್‌ಗೆ ರೂ.2.00 ರಂತೆ ಸಹಾಯಧನ ನೀಡುವುದು.
5. ಪ.ಜಾತಿ / ಪ.ಪಂಗಡ ಉದ್ದಿಮೆದಾರರು ಹೊಸದಾಗಿ ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಹಣಕಾಸು ಸಂಸ್ಥೆಗಳು ವಿಧಿಸುವ ವಿವಿಧ ಶುಲ್ಕಗಳನ್ನು ಸರ್ಕಾರದಿಂದ ಭರಿಸುವುದು.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

6. ಕೆ.ಎಸ್.ಎಸ್.ಐ.ಡಿ.ಸಿ ವತಿಯಿಂದ ಈ ಹಿಂದೆ ಶೆಡ್‌ಗಳಿಗೆ ನೀಡಿದ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡುವುದು ಹಾಗೂ ಇನ್ನು ಮುಂದೆ ಸಾಲವನ್ನು ಶೆಡ್‌ಗಳ ಖರೀದಿಗೆ ಶೇ.4 ರಷ್ಟು ಬಡ್ಡಿಯಿಂದ ನೀಡುವುದು.
7. 2017-18ನೇ ಸಾಲಿನಲ್ಲಿ ಸಂಸ್ಥೆಗಳಿಗಾಗಿ ಮೂಲಭೂತ ಸೌಕರ್ಯ ಕಾರ್ಯಕ್ರಮಕ್ಕೆ TSP ಯಡಿಯಲ್ಲಿ ರೂ.54.41 ಕೋಟಿಗಳು ಒದಗಿಸಿದ್ದು, ಈ ಪೈಕಿ ಉಳಿಕೆಯಾದ ರೂ.17.45 ಕೋಟಿಗಳನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗೆ ಮರುಹಂಚಿಕೆ ಮಾಡುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಭಾರಿ ಮತ್ತು ಮಧ್ಯಮ ಕೈಗಾರಿಕಾ ಇಲಾಖೆ)**

## 23. ಸಣ್ಣ ಪ್ರಮಾಣದ ಕೈಗಾರಿಕೆ ಇಲಾಖೆ

ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಪ.ಜಾತಿ / ಪ.ಪಂಗಡ ಉದ್ದಿಮೆದಾರರು ಹೊಸದಾಗಿ ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷ ಅವಧಿಗೆ ವಿದ್ಯುತ್ ಸರಬರಾಜಿನಲ್ಲಿ ಒಂದು ಯುನಿಟ್‌ಗೆ ರೂ.2.00 ರಂತೆ ಸಹಾಯಧನ ನೀಡುವುದು.
2. ಪ.ಜಾತಿ / ಪ.ಪಂಗಡ ಉದ್ದಿಮೆದಾರರು ಹೊಸದಾಗಿ ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಹಣಕಾಸು ಸಂಸ್ಥೆಗಳು ವಿಧಿಸುವ ವಿವಿಧ ಶುಲ್ಕಗಳನ್ನು ಸರ್ಕಾರದಿಂದ ಭರಿಸುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಸಣ್ಣ ಪ್ರಮಾಣದ ಕೈಗಾರಿಕೆ ಇಲಾಖೆ)**

## 24. ನಗರಾಭಿವೃದ್ಧಿ ಇಲಾಖೆ

ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರು ಮಾತನಾಡಿ, ನಗರೋತ್ಥಾನ ಯೋಜನೆಯ ಕ್ರಿಯಾ ಯೋಜನೆಗಳಿಗೆ ಈಗಾಗಲೇ ಅನುಮೋದನೆ ನೀಡಿರುವುದರಿಂದ ಪ.ಜಾತಿ / ಪ.ಪಂಗಡ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಪ್ರದೇಶಗಳನ್ನು ಗುರುತಿಸಿ, ರಸ್ತೆ ಮತ್ತು ಒಳಚರಂಡಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕಷ್ಟಕರವಾಗುತ್ತದೆ ಎಂದು ಪ್ರಸ್ತಾಪಿಸಿದರು.

ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರು ಮಾತನಾಡಿ ನಗರೋತ್ಥಾನ ಕಾರ್ಯಕ್ರಮದ ಕ್ರಿಯಾ ಯೋಜನೆ ಬಗ್ಗೆ ಹಿಂದಿನ ವರ್ಷದಲ್ಲಿ ಅನುಷ್ಠಾನಗೊಳಿಸಲು ಅವಕಾಶವಿತ್ತು, ಪ್ರಸಕ್ತ ಸಾಲಿನಲ್ಲಿ ಡೀಮ್ಡ್ ವೆಚ್ಚ ಬದಲಾಗಿ ಸಮಾಜ ಕಲ್ಯಾಣ ಇಲಾಖೆ ಶಿಫಾರಸ್ಸಿನಂತೆ ಕ್ರಮ ವಹಿಸುವುದು ಸೂಕ್ತವೆಂದು ತಿಳಿಸಿದರು. ಈ ಬಗ್ಗೆ ಚರ್ಚಿಸಿ, ನಗರೋತ್ಥಾನ ಕಾರ್ಯಕ್ರಮದಲ್ಲಿಯೇ ಪ.ಜಾತಿ / ಪ.ಪಂಗಡದವರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳನ್ನು ಗುರುತಿಸಿ, ರಸ್ತೆ ಮತ್ತು ಒಳಚರಂಡಿ ಕಾಮಗಾರಿಗಳನ್ನು ಮಾಡಲು ತೀರ್ಮಾನಿಸಲಾಯಿತು.

ನಗರಾಭಿವೃದ್ಧಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

1. ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದಲ್ಲಿರುವ ಸಫಾಯಿ ಕರ್ಮಚಾರಿಗಳು / ಗುರುತಿಸಲಾದ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳು ಹೆಚ್ಚಾಗಿ ವಾಸಿಸುತ್ತಿರುವ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
2. ಈ ಎರಡು ಗುಂಪುಗಳಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ನಗರದಲ್ಲಿ ಮನೆ ನಿರ್ಮಾಣಕ್ಕಾಗಿ ರೂ.2.00 ಲಕ್ಷದಂತೆ ನೀಡುವ ಅನುದಾನದ ಜೊತೆಗೆ ಹೆಚ್ಚುವರಿಯಾಗಿ ರೂ.2.00 ಲಕ್ಷಗಳನ್ನು ನೀಡುವುದು. (ಒಟ್ಟು ರೂ.4.00 ಲಕ್ಷಗಳಲ್ಲಿ ಮನೆ ನಿರ್ಮಾಣ)
3. ಪ.ಜಾತಿ / ಪ.ಪಂಗಡದವರು ಹೆಚ್ಚಾಗಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವವರಿಗೆ ಕುಡಿಯುವ ನೀರು ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
4. ಹಿಂದೆ ಮೃತಪಟ್ಟಿರುವ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳಿಗೆ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ರೂ.10.00 ಲಕ್ಷಗಳ ಪರಿಹಾರಧನವನ್ನು ನೀಡುವುದು
5. 1,000 ಸಫಾಯಿ ಕರ್ಮಚಾರಿಗಳನ್ನು ಅಧ್ಯಯನಕ್ಕಾಗಿ ವಿದೇಶಕ್ಕೆ ಕಳುಹಿಸುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ)**

## 25. ಲೋಕೋಪಯೋಗಿ ಇಲಾಖೆ

ಲೋಕೋಪಯೋಗಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಪ.ಜಾತಿ / ಪ.ಪಂಗಡದವರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು (ಸಿ.ಸಿ. ರಸ್ತೆ, ಸಂಪರ್ಕ ರಸ್ತೆ ಮತ್ತು ಚರಂಡಿ) ಕಲ್ಪಿಸುವುದಕ್ಕಾಗಿ ಅನುದಾನವನ್ನು ಉಪಯೋಗಿಸುವುದು.
2. ಪ.ಜಾತಿ / ಪ.ಪಂಗಡದವರ ಜನಸಂಖ್ಯೆ ಆಧಾರದ ಮೇಲೆ ವಿಧಾನಸಭಾ ಕ್ಷೇತ್ರಗಳಿಗೆ ಅನುದಾನ ಹಂಚಿಕೆ ಮಾಡುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ)**

## 26. ಭಾರಿ ನೀರಾವರಿ ಇಲಾಖೆ

ಸರ್ಕಾರದ ಕಾರ್ಯದರ್ಶಿ, ಭಾರಿ ನೀರಾವರಿ ಇಲಾಖೆಯವರು ಮಾತನಾಡಿ, ಕಾಡಾ ವಿಶೇಷ ಅಭಿವೃದ್ಧಿ ಕಾರ್ಯಕ್ರಮ ಆಗಿದ್ದರಿಂದ ಅದಕ್ಕೆ ಒದಗಿಸಿದ್ದ ರೂ.15.40 ಕೋಟಿಗಳನ್ನು ಅವರ ವ್ಯಾಪ್ತಿಯಲ್ಲಿ ಬರುವ ಅಚ್ಚುಕಟ್ಟುಗಳಲ್ಲಿ ಪ.ಜಾತಿ / ಪ.ಪಂಗಡ ರೈತರಿಗೆ ಅನುಕೂಲವಾಗುವಂತೆ ಕಾಲುವೆ ದುರಸ್ತಿ ಇತ್ಯಾದಿ ಮಾಡಲು ಅನುಮತಿ ನೀಡಲು ಕೋರಿದರು.

ಮುಂದುವರೆದು SCSP / TSP ಅನುದಾನದಿಂದ ಭೂಸ್ವಾಧೀನಕ್ಕೆ ಪ.ಜಾತಿ/ಪ.ಪಂಗಡದವರಿಗೆ ಪರಿಹಾರಧನ ನೀಡಲು ಕೋರಿದರು. ಈ ಬಗ್ಗೆ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರು ಮಾತನಾಡಿ, SCSP / TSP ಅಡಿಯಲ್ಲಿ ಯೋಜನಾ ಪ್ರದೇಶಗಳಲ್ಲಿ ಪ.ಜಾತಿ / ಪ.ಪಂಗಡದವರಿಗೆ

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಪುನರ್ವಸತಿ ಕಲ್ಪಿಸುವ ಕಾರ್ಯಕ್ರಮಗಳಿಗೆ ಉಪಯೋಗಿಸಬೇಕಾಗಿದೆ ಹೊರತು ಭೂಸ್ವಾಧೀನ ಕಾರ್ಯಕ್ರಮಕ್ಕೆ ಬಳಸಬಾರದೆಂದು ಹೇಳಿ, ಈ ಪ್ರಸ್ತಾವನೆಯನ್ನು ಒಪ್ಪಬಾರದೆಂದು ಕೋರಿದರು.

ಕಾರ್ಯದರ್ಶಿ, ಭಾರಿ ನೀರಾವರಿ ಇಲಾಖೆ ರವರು ಮಾತನಾಡಿ, ಪ.ಜಾತಿ/ಪ.ಪಂಗಡದ ನೀರಾವರಿ ಸೌಲಭ್ಯ ಕಲ್ಪಿಸಿದ್ದಲ್ಲಿ ಜಮೀನು ವಿಸ್ತೀರ್ಣ ತೆಗೆದುಕೊಳ್ಳದೆ ಫಲಾನುಭವಿಗಳ ಸಂಖ್ಯೆ ತೆಗೆದುಕೊಳ್ಳಲು ಕೋರಿದರು. ಇದರ ಬಗ್ಗೆ ಚರ್ಚಿಸಿ ಜಮೀನು ವಿಸ್ತೀರ್ಣ ಮತ್ತು ಫಲಾನುಭವಿಗಳ ಸಂಖ್ಯೆ ಎರಡನ್ನು ಗಣನೆಗೆ ತೆಗೆದುಕೊಂಡು ಕಾರ್ಯಕ್ರಮ ಅನುಷ್ಠಾನಗೊಳಿಸುವುದೆಂದು ನಿರ್ಧರಿಸಲಾಯಿತು.

ಭಾರಿ ನೀರಾವರಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆಬಾವಿಗಳ ಸೌಲಭ್ಯವನ್ನು ಪಡೆದ ಪ.ಜಾತಿ / ಪ.ಪಂಗಡದ ಫಲಾನುಭವಿಗಳಿಗೆ ಕೃಷಿ ಹೊಂಡ, ಹನಿ ಮತ್ತು ತುಂತುರು ನೀರಾವರಿ ಸೌಲಭ್ಯವನ್ನು ಒದಗಿಸುವುದು.

2. ಅಚ್ಚುಕಟ್ಟು ಪ್ರದೇಶಗಳಲ್ಲಿ ಬರುವ ವಸತಿ ಶಾಲೆಗಳ ಸಂಕೀರ್ಣ / ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ / ಕಾಲೋನಿಗಳ ಅಭಿವೃದ್ಧಿ ಮತ್ತು ಸಮುದಾಯ ಭವನಗಳು ಸೇರಿರುತ್ತವೆ. (ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳಿಂದ ಸಮುದಾಯ ಭವನಗಳನ್ನು ಮಂಜೂರು ಮಾಡಿದ ಪಟ್ಟಿಗಳನ್ನು ಸಹ ಒದಗಿಸಲಾಗುವುದು).

3. ಪ.ಜಾತಿ / ಪ.ಪಂಗಡದವರ ಜನಸಂಖ್ಯೆಯ ಆಧಾರದ ಮೇಲೆ ವಿಧಾನಸಭಾ ಕ್ಷೇತ್ರವಾರು ಅನುದಾನ ಹಂಚಿಕೆ ಮಾಡಿ ಕಾಲೋನಿಗಳಲ್ಲಿ ನೀರಾವರಿಯೇತರ ಕಾಮಗಾರಿಗಳಾದ ಸಿ.ಸಿ. ರಸ್ತೆ, ಒಳಚರಂಡಿ ಮತ್ತು ಸಮುದಾಯ ಭವನ ಕಾಮಗಾರಿಗಳನ್ನು ತೆಗೆದುಕೊಳ್ಳುವುದು.

4. ಪ.ಜಾತಿ / ಪ.ಪಂಗಡದವರ ಜಮೀನುಗಳನ್ನು ಗುರುತಿಸಿ ನೀರಾವರಿ ಸೌಕರ್ಯ ಕಲ್ಪಿಸುವುದು

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಭಾರಿ ನೀರಾವರಿ ಇಲಾಖೆ)**

## 27. ಸಣ್ಣ ನೀರಾವರಿ ಇಲಾಖೆ

ಸಲಹೆಗಾರರು ಮಾತನಾಡಿ, ಸಣ್ಣ ನೀರಾವರಿ ಇಲಾಖೆಯ ಮಾಹಿತಿಯಂತೆ ಪ್ರಸ್ತುತ SCSP/TSP ಯಡಿಯಲ್ಲಿ ರೂ.748.54 ಕೋಟಿ ಮತ್ತು ರೂ.287.12 ಕೋಟಿಗಳ ವೆಚ್ಚದ ಕಾಮಗಾರಿಗಳು ಮುಂದುವರೆದ ಕಾಮಗಾರಿಗಳೆಂದು ತಿಳಿಸಿದ್ದು, ಇವುಗಳನ್ನು ಪೂರ್ಣಗೊಳಿಸಲು ಈ ವರ್ಷದ ಅನುದಾನವನ್ನು ಉಪಯೋಗಿಸಬಹುದೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸಣ್ಣ ನೀರಾವರಿ ಸಚಿವರು ಮಾತನಾಡಿ, ಈಗಾಗಲೇ ಬಹಳಷ್ಟು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದ್ದು ಅಪೂರ್ಣವಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾಗುವ ಅನುದಾನವನ್ನು ಭಾರಿ ನೀರಾವರಿ ಇಲಾಖೆಯಿಂದ ಕೊಡಿಸಬೇಕೆಂದು ಕೋರಿದರು.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಹಂಚಿಕೆ ಮಾಡಿದ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ ಹೊರತು ಹೆಚ್ಚುವರಿಯಾಗಿ ಕಾಮಗಾರಿಗಳನ್ನು ಮಂಜೂರು ಮಾಡಿದ್ದರಿಂದ ಈ ಸಮಸ್ಯೆ ಉದ್ಭವವಾಗಿದೆ ಎಂದು ತಿಳಿಸಿ, ಅನುದಾನದ ಆಧಾರದ ಮೇಲೆ ಅದೇ ವರ್ಷ ಕಾಮಗಾರಿಗಳನ್ನು ಮಂಜೂರಾತಿ ನೀಡಿ ಪೂರ್ಣಗೊಳಿಸಲು ಸೂಚಿಸಿದರು

ಸಣ್ಣ ನೀರಾವರಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. SCSP/TSP ಯಡಿಯಲ್ಲಿ ರೂ.748.54 ಕೋಟಿ ಮತ್ತು ರೂ.287.12 ಕೋಟಿಗಳ ವೆಚ್ಚದ ಕಾಮಗಾರಿಗಳು ಮುಂದುವರೆದ ಕಾಮಗಾರಿಗಳೆಂದು ತಿಳಿಸಿದ್ದು, ಇವುಗಳನ್ನು ಪೂರ್ಣಗೊಳಿಸಲು ಈ ವರ್ಷದ ಅನುದಾನವನ್ನು ಉಪಯೋಗಿಸುವುದು.
2. ಭಾರಿ ನೀರಾವರಿ ಇಲಾಖೆಯಿಂದ ಅನುದಾನವನ್ನು ಸಣ್ಣ ನೀರಾವರಿ ಇಲಾಖೆಗೆ ನೀಡುವ ಬಗ್ಗೆ ಪರಿಶೀಲಿಸಿ, ಕ್ರಮ ತೆಗೆದುಕೊಳ್ಳುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ)**

## 28. ವೈದ್ಯಕೀಯ ಶಿಕ್ಷಣ ಇಲಾಖೆ

ಅಪರ ಮುಖ್ಯ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ ರವರು ಮಾತನಾಡಿ, ಜಯದೇವ, ಕಿದ್ವಾಯಿ, ಮೈಸೂರು ಮೆಡಿಕಲ್ ಕಾಲೇಜುಗಳಲ್ಲಿ ಪ.ಜಾತಿ/ಪ.ಪಂಗಡ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲು ಹೆಚ್ಚಿನ ಅನುದಾನ ಅವಶ್ಯಕತೆಯಿದ್ದು ರೂ.15.00 ಕೋಟಿಗಳನ್ನು ಹೆಚ್ಚುವರಿಯಾಗಿ ಒದಗಿಸಲು ಕೋರಿದರು. ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಪ್ರತಿಕ್ರಿಯಿಸಿ ಈ ಬಗ್ಗೆ ಪರಿಶೀಲಿಸಲಾಗುವುದೆಂದು ತಿಳಿಸಿದರು.

ವೈದ್ಯಕೀಯ ಶಿಕ್ಷಣ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ಎಲ್ಲಾ ವೈದ್ಯಕೀಯ / ದಂತ ವೈದ್ಯಕೀಯ / ಪದವಿ / ಸ್ನಾತಕೋತ್ತರ / ಪಿ.ಹೆಚ್.ಡಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕುಟುಂಬ ವಾರ್ಷಿಕ ವರಮಾನ ರೂ.5.00 ಲಕ್ಷದೊಳಗಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡುವುದು ಮತ್ತು ಪುಸ್ತಕ ಭಂಡಾರ ಸ್ಥಾಪಿಸುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ)**

## 29. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ಮಾತನಾಡಿ ಐ.ಸಿ.ಯು ಘಟಕಗಳನ್ನು ಈ ವರ್ಷ ಒದಗಿಸಿದ ವೆಚ್ಚವಾಗದೇ ಇರುವ ಅನುದಾನದಿಂದ ಸ್ಥಾಪಿಸಲು ಅನುಮತಿ ಕೋರಿದರು.

ಶ್ರೀ ಧ್ರುವನಾರಾಯಣ, ಮಾನ್ಯ ಲೋಕಸಭಾ ಸದಸ್ಯರು ಮಾತನಾಡಿ ಕೇಂದ್ರ ಸರ್ಕಾರದ ಯೋಜನೆಯಡಿ ಚಾಮರಾಜನಗರ ಜಿಲ್ಲೆಯಲ್ಲಿ M.C.H ನಿರ್ಮಿಸಿ ಮೂರು ವರ್ಷಗಳಾಗಿದ್ದರೂ ಸಹ

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಈವರೆಗೆ ಅದನ್ನು ಪ್ರಾರಂಭಿಸಿಲ್ಲ, ವೈದ್ಯಕೀಯ ಉಪಕರಣಗಳು ಮತ್ತು ಸಿಬ್ಬಂದಿಗಳ ನೇಮಕಾತಿ ಬಗ್ಗೆ ಕ್ರಮ ವಹಿಸಿ, ತಕ್ಷಣ ಆಸ್ಪತ್ರೆಯನ್ನು ಪ್ರಾರಂಭಿಸಲು ಆಗ್ರಹಿಸಿದರು.

ಮಾನ್ಯ ಕಂದಾಯ ಸಚಿವರು ಮಾತನಾಡಿ, ಈ ಆಸ್ಪತ್ರೆಗಳಿಗೆ ಅಗತ್ಯ ಸಿಬ್ಬಂದಿಗಳನ್ನು ಮಂಜೂರು ಮಾಡಲಾಗಿದೆಯೇ ಎಂದು ಪ್ರಶ್ನಿಸಿ ಮೊದಲು ಸಿಬ್ಬಂದಿ ಮಂಜುರಾತಿಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರು ಮಾತನಾಡಿ, ಮೇಲ್ಕಂಡ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಟೆಂಡರ್ ಕರೆಯಲಾಗಿದೆ ಮತ್ತು ಸಿಬ್ಬಂದಿಗಳ ನೇಮಕಾತಿಗೆ ಕ್ರಮ ಜರುಗಿಸಲಾಗುತ್ತಿದೆ ಎಂದು ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಗುರುತಿಸಿದ ಖಾಯಂ / ಗುತ್ತಿಗೆ / ಹೊರಗುತ್ತಿಗೆ ಸಫಾಯಿ ಕರ್ಮಚಾರಿಗಳಿಗೆ ಜ್ಯೋತಿ ಸಂಜೀವಿನಿ ಆರೋಗ್ಯ ಸುರಕ್ಷಾ ಯೋಜನೆಯಡಿ ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು.
2. ಆರೋಗ್ಯ ಕವಚ ಯೋಜನೆಯಡಿ ಗುಡ್ಡಗಾಡು ಪ್ರದೇಶಗಳಲ್ಲಿರುವ ಪ.ಜಾತಿ / ಪ.ಪಂಗಡ ಜನರಿಗೆ ಮೊಬೈಲ್ ವಾಹನಗಳ ಮುಖಾಂತರ ಆರೋಗ್ಯ ಸೌಲಭ್ಯಗಳನ್ನು ಕಲ್ಪಿಸುವುದು.
3. ಅತೀ ಹೆಚ್ಚು ಅಂದರೆ ಶೇ.100 ಪ್ರತಿಶತದಿಂದ ಪ್ರಾರಂಭಗೊಂಡು ಕನಿಷ್ಠ ಶೇ.50 ಪ್ರತಿಶತದವರೆಗೆ ಪ.ಜಾತಿ / ಪ.ಪಂಗಡದವರು ವಾಸಿಸುತ್ತಿರುವ ಗ್ರಾಮಗಳಲ್ಲಿ ಆರೋಗ್ಯ ತಪಾಸಣೆ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ತಾಂಡಾಗಳಲ್ಲಿ ಹಾಗೂ ಪ.ಜಾತಿ / ಪ.ಪಂಗಡ ಕಾಲೋನಿಗಳಲ್ಲಿ ಆರೋಗ್ಯದ ಬಗ್ಗೆ ಮುಖ್ಯವಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
4. ಐ.ಸಿ.ಯು ಘಟಕಗಳನ್ನು ವೆಚ್ಚವಾಗದೆ ಇರುವ ಅನುದಾನದಿಂದ ಪ್ರಾರಂಭಿಸುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)**

## 30. ಕಾರ್ಮಿಕ ಇಲಾಖೆ

ಕಾರ್ಮಿಕ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಪರಿಶೀಲಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಆಶಾ ದೀಪ ಯೋಜನೆಯಡಿಯಲ್ಲಿ ಖಾಸಗಿ ಸಂಸ್ಥೆಗಳಲ್ಲಿ ಪ.ಜಾತಿ / ಪ.ಪಂಗಡ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಉತ್ತೇಜಿಸಲು ಸಲುವಾಗಿ ಪಿ.ಎಫ್ ಮತ್ತು ಇ.ಎಸ್.ಐ ವಂತಿಕೆಯನ್ನು ಸರ್ಕಾರದಿಂದ ನೀಡುವುದು.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ)**

## 31. ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ & ತರಬೇತಿ ಇಲಾಖೆ

ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ ಇಲಾಖೆ ರವರು ಮಾತನಾಡಿ, ಈ ವರ್ಷ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಒಟ್ಟು 5,00,000 ಯುವಕ/ಯುವತಿಯರಿಗೆ ಕೌಶಲ್ಯ ತರಬೇತಿ ನೀಡಲು ಕ್ರಮ ಜರುಗಿಸಲಾಗುತ್ತದೆ. ಆದರೆ ಸಮಾಜ ಕಲ್ಯಾಣ ಇಲಾಖೆಯ ಆಯವ್ಯಯದಲ್ಲಿ ಘೋಷಿಸಿರುವ 1,00,000 ಯುವಕ/ಯುವತಿಯರಿಗೆ ಕೌಶಲ್ಯ ತರಬೇತಿ ನೀಡುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯಿಂದಲೇ ನೇರವಾಗಿ ಅನುಷ್ಠಾನಗೊಳಿಸಬಹುದೆಂದು ತಿಳಿಸಿದರು.

ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಮತ್ತು ತರಬೇತಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. 1,00,000 ಪ.ಜಾತಿ ಮತ್ತು 35,000 ಪ.ಪಂಗಡ ಯುವಕ / ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು (ಶೇ.70 ರಷ್ಟು ಉದ್ಯೋಗಾವಕಾಶ ಕಲ್ಪಿಸುವುದು)

2. ಪ.ಜಾತಿ ಮತ್ತು ಪ.ಪಂಗಡದ ಉದ್ದಿಮೆದಾರರ ಸಂಘಗಳ ವತಿಯಿಂದ ಸ್ಥಾಪಿಸಲಾಗುವ ಕೌಶಲ್ಯಾಭಿವೃದ್ಧಿ ಕೇಂದ್ರದ ವಿಸ್ತರಣೆಗಾಗಿ ಅನುದಾನ ನೀಡುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಮತ್ತು ತರಬೇತಿ ಇಲಾಖೆ)**

## 32. ಇಂಧನ ಇಲಾಖೆ

ಮಾನ್ಯ ಕಂದಾಯ ಸಚಿವರು ಮಾತನಾಡಿ, ಗಂಗಾ ಕಲ್ಯಾಣ ಯೋಜನೆಯಡಿ ಹನಿ ನೀರಾವರಿ ಮತ್ತು ತುಂತುರು ನೀರಾವರಿ ರೈತರಿಗೆ ಒದಗಿಸಿದ್ದಲ್ಲಿ ಪ.ಜಾತಿ/ಪ.ಪಂಗಡದ ರೈತರ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತದೆ ಎಂದು ಹೆಚ್ಚಿನ ಸಂಖ್ಯೆಯಲ್ಲಿ ಕೊಳವೆಬಾವಿಗಳನ್ನು ಮಂಜೂರು ಮಾಡಲು ಪ್ರಸ್ತಾಪಿಸಿದರು.

ಈ ವಿಷಯದ ಬಗ್ಗೆ ಶ್ರೀ ಧ್ರುವನಾರಾಯಣ ಮತ್ತು ಶ್ರೀ ಕೆ.ಎನ್ ರಾಜಣ್ಣ ರವರು ಮಾತನಾಡಿ, ಹೆಚ್ಚುವರಿ ಅನುದಾನ ಒದಗಿಸಿಕೊಂಡು ಹೆಚ್ಚಿನ ಜನರಿಗೆ ಅನುಕೂಲವಾಗುವಂತೆ ಕ್ರಮ ಜರುಗಿಸುವಂತೆ ಹೇಳಿದರು.

ಮಾನ್ಯ ಕಾನೂನು ಸಚಿವರು ಮಾತನಾಡಿ, ಕೊಳವೆಬಾವಿಗಳನ್ನು ಕೊರೆಯುವುದನ್ನು ತ್ವರಿತಗೊಳಿಸಬೇಕೆಂದು ಮತ್ತು ತಕ್ಷಣವೇ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಸೂಚಿಸಿದರು.

ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳನ್ನು ಕೊರೆಯಲು ಟೆಂಡರ್‌ಗಳನ್ನು ಜಿಲ್ಲಾ ಮಟ್ಟದಲ್ಲಿಯೇ ಅಂತಿಮಗೊಳಿಸಲು ಮತ್ತು ವಿದ್ಯುತ್ ಸಂಪರ್ಕ

ಮುಖ್ಯಮಂತ್ರಿಗಳ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಕಲ್ಪಿಸುವ ಬಗ್ಗೆ ಎಲ್ಲಾ ವಿದ್ಯುತ್ ನಿಗಮಗಳನ್ನು ಮತ್ತು ಇಲಾಖೆಯನ್ನು ಕರೆಸಿ ಒಂದು ಸಭೆ ನಡೆಸಿ ತ್ವರಿತವಾಗಿ ವಿದ್ಯುತ್ ಕಲ್ಪಿಸುವ ಬಗ್ಗೆ ಕ್ರಮ ಜರುಗಿಸಲು ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಸೂಚಿಸಿದರು.

ಇಂಧನ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಕೃಷಿ ಪಂಪ್‌ಸೆಟ್, ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆಗಳಡಿ ಸಹಾಯಧನಕ್ಕಾಗಿ ನೀಡಿದ ಅನುದಾನವನ್ನು ಉಪಯೋಗಿಸುವುದು. ಈ ಯೋಜನೆಗಳಲ್ಲಿ ಎಷ್ಟು ಪ.ಜಾತಿ/ಪ.ಪಂಗಡಗಳಿಗೆ ಸವಲತ್ತು ನೀಡಲಾಗುತ್ತಿದೆ ಎಂಬುದರ ಬಗ್ಗೆ ಅಂಕಿ-ಅಂಶಗಳನ್ನು ಸಂಗ್ರಹಿಸಿ ಸಮಾಜ ಕಲ್ಯಾಣ ಇಲಾಖೆಗೆ ನೀಡುವುದು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ)**

## 33. ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಪರಿಶೀಲಿಸಿ, ಮುಂದಿನ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಡಾ|| ಬಿ.ಆರ್. ಅಂಬೇಡ್ಕರ್ ಸಂವಿಧಾನದ ಡಿಬೇಟ್‌ಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ, ಮುದ್ರಿಸುವುದು ಮತ್ತು ಡಾ|| ಬಾಬು ಜಗಜೀವನರಾಂ ಬಗ್ಗೆ ಪುಸ್ತಕಗಳನ್ನು ಮುದ್ರಿಸುವುದು.

2. ಸಮಾಜ ಕಲ್ಯಾಣ ಇಲಾಖೆಯಿಂದ ಗುರುತಿಸಿದ ಪ.ಜಾತಿ / ಪ.ಪಂಗಡ ಕಲಾವಿದರನ್ನು ಅಂತರಾಷ್ಟ್ರೀಯ ಕನ್ನಡ ಸಮ್ಮೇಳನಗಳಿಗೆ ವಿದೇಶಕ್ಕೆ ಕಳುಹಿಸಲು ತಗಲುವ ವೆಚ್ಚವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಭರಿಸುವುದು

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ)**

## 34. ಯೋಜನಾ ಇಲಾಖೆ

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆಯವರು ಮಾತನಾಡಿ, ವಿವಿಧ ಅಭಿವೃದ್ಧಿ ಮಂಡಳಿಗಳಲ್ಲಿ ಕಾರ್ಯಕ್ರಮಗಳ ಕ್ರಿಯಾ ಯೋಜನೆಗಳನ್ನು ಅಂತಿಮಗೊಳಿಸುವಲ್ಲಿ ವಿಳಂಬ ಮತ್ತು ಅನುಮೋದಿಸಿದ ಕ್ರಿಯಾ ಯೋಜನೆಗಳಲ್ಲಿ ಕಾಮಗಾರಿಗಳನ್ನು ಮಾರ್ಪಾಡು ಮಾಡುವುದು ಇತ್ಯಾದಿ ಕಾರಣಗಳಿಂದ ಶೇ.100 ರಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸುತ್ತಾ, ಅನುಷ್ಟಾನವನ್ನು ಚುರುಕುಗೊಳಿಸಲು ಸ್ವತಃ ಜಿಲ್ಲೆಗಳಿಗೆ ಭೇಟಿನೀಡಿ ತ್ವರಿತಗೊಳಿಸಲಾಗುವುದೆಂದು ತಿಳಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಾಲಕಾಲಕ್ಕೆ ವಿಡಿಯೋ ಕಾನ್ಫರೆನ್ಸ್ ಮುಖಾಂತರ ಸಭೆಗಳನ್ನು ನಡೆಸಿ ಜಿಲ್ಲಾಧಿಕಾರಿಗಳು ತ್ವರಿತವಾಗಿ ಕಾಮಗಾರಿಗಳನ್ನು ಅನುಷ್ಟಾನಗೊಳಿಸುವಲ್ಲಿ ಕ್ರಮ ಜರುಗಿಸಲು ಸೂಚಿಸಿದರು.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

ಡಾ॥ ಉಮೇಶ್ ಜಾದವ್, ಮಾನ್ಯ ವಿಧಾನ ಸಭಾ ಸದಸ್ಯರು ಮಾತನಾಡಿ ಹೆಚ್.ಕೆ.ಡಿ.ಬಿಯಲ್ಲಿ ಸಹ ಅನುಷ್ಠಾನದ ಸಮಸ್ಯಗಳಿವೆ ಪ್ರಧಾನ ಕಾರ್ಯದರ್ಶಿಗಳು ಕಲಬುರಗಿ ಜಿಲ್ಲೆಗೆ ಭೇಟಿ ಮಾಡುವಾಗ ತಿಳಿಸಿದ್ದಲ್ಲಿ ಸ್ಥಳದಲ್ಲಿಯೇ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಜರುಗಿಸಬಹುದೆಂದು ಹೇಳಿದರು.

ಯೋಜನಾ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ವಿಧಾನಸಭಾ ಕ್ಷೇತ್ರವಾರು ಪ.ಜಾತಿ / ಪ.ಪಂಗಡವರ ಜನಸಂಖ್ಯೆ ಆಧಾರದ ಮೇಲೆ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯನ್ನು ಹಂಚಿಕೆ ಮಾಡುವುದು.

2. ವಿವಿಧ ಅಭಿವೃದ್ಧಿ ಮಂಡಳಿಗಳಿಗೆ ಹಂಚಿಕೆಯಾದ ಅನುದಾನವನ್ನು ಸಹ ಅವುಗಳ ವ್ಯಾಪ್ತಿಯಲ್ಲಿ ಬರುವ ವಿಧಾನಸಭಾ ಕ್ಷೇತ್ರಗಳಿಗೆ ಪ.ಜಾತಿ / ಪ.ಪಂಗಡ ಜನಸಂಖ್ಯೆ ಆಧಾರದ ಮೇಲೆ ಹಂಚಿಕೆ ಮಾಡಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ, ವಿವಿಧ ಅಭಿವೃದ್ಧಿ ಮಂಡಳಿಗಳಿಗೆ ಹಿಂದಿನ ವರ್ಷದಲ್ಲಿ ನೀಡಿದ ಅನುದಾನವನ್ನು ಪೂರ್ಣಮಟ್ಟದಲ್ಲಿ ಖರ್ಚು ಮಾಡದೆ ಇದ್ದು ಈ ವರ್ಷ ಎಲ್ಲಾ ಅನುದಾನವನ್ನು ವೆಚ್ಚಮಾಡಲು ಸೂಕ್ತ ಕ್ರಮ ಜರುಗಿಸಲು ಯೋಜನಾ ಇಲಾಖೆಗೆ ಸೂಚಿಸಿದರು.

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ)**

## 35. ಕಾನೂನು ಇಲಾಖೆ

ಹಿಂದಿನ ವರ್ಷ SCSP / TSP ಅನುದಾನದಡಿ ಯಾವುದೇ ವೆಚ್ಚ ಮಾಡದೆ ಶೂನ್ಯ ಪ್ರಗತಿ ಸಾಧಿಸಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಲಾಯಿತು. ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ರೂ.1.86 ಕೋಟಿಗಳನ್ನು ವೆಚ್ಚ ಮಾಡಲು ಕ್ರಮ ಜರುಗಿಸಬೇಕೆಂದು ಸೂಚಿಸಲಾಯಿತು.

ಕಾನೂನು ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಪರಿಶೀಲಿಸಿ, ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ಸರ್ಕಾರಿ ಮತ್ತು ಖಾಸಗಿ ಕಾನೂನು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಗೆ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ತರಬೇತಿ ನೀಡಲಾಗುತ್ತಿರುವ ವಕೀಲರಿಗೆ ಲ್ಯಾಪ್‌ಟಾಪ್ (ಕುಟುಂಬದ ವಾರ್ಷಿಕ ಆದಾಯ ರೂ.5.00 ಲಕ್ಷದೊಳಗಿರತಕ್ಕದ್ದು) ಮತ್ತು ಕಾನೂನು ಪುಸ್ತಕಗಳನ್ನು ಒದಗಿಸುವುದು.

**(ಕ್ರಮ : ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ)**

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

## 36. ಸಮಾಜ ಕಲ್ಯಾಣ ಇಲಾಖೆ (ಪ.ಜಾತಿ / ಪ.ಪಂಗಡ ಕಲ್ಯಾಣ)

ಸಮಾಜ ಕಲ್ಯಾಣ ಇಲಾಖೆಯ ಕ್ರಿಯಾ ಯೋಜನೆ ಬಗ್ಗೆ ಚರ್ಚಿಸಿ, ಮುಂದುವರೆದ ಕಾರ್ಯಕ್ರಮಗಳೊಂದಿಗೆ ಈ ಕೆಳಕಂಡ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

1. ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮತ್ತು ವೆಚ್ಚವಾಗದೆ ಇರುವ ಅನುದಾನದ ರಾಜಸ್ವ ಮತ್ತು ಬಂಡವಾಳ ಲೆಕ್ಕಶೀರ್ಷಿಕೆಗಳಡಿ ಒದಗಿಸಿದ ಒಟ್ಟು ಅನುದಾನವನ್ನು ಅನುಬಂಧ 1 ರಿಂದ 4 ರಲ್ಲಿ ಒದಗಿಸಿದ ಕಾರ್ಯಕ್ರಮಗಳಿಗೆ ಅನುಮೋದನೆ ನೀಡಲಾಗಿದೆ.

2. ಪ.ಜಾತಿ / ಪ.ಪಂಗಡದಲ್ಲಿ ಅಲೆಮಾರಿ / ಸೂಕ್ಷ್ಮ / ಅತೀ ಸೂಕ್ಷ್ಮ ಜಾತಿಗಳನ್ನು ಗುರುತಿಸಿದ್ದು, ಅವರುಗಳಿಗೆ ಮನೆ ನಿರ್ಮಾಣಕ್ಕಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ನೀಡಲಾಗುತ್ತಿರುವ ಸಹಾಯಧನದ ಜೊತೆಗೆ ಹೆಚ್ಚುವರಿಯಾಗಿ ಗ್ರಾಮೀಣ ಪ್ರದೇಶದಲ್ಲಿ ರೂ.1.75 ಲಕ್ಷ ಮತ್ತು ನಗರ ಪ್ರದೇಶದಲ್ಲಿ ರೂ.2.00 ಲಕ್ಷಗಳನ್ನು ನೀಡಲಾಗುವುದು. (ಘಟಕ ವೆಚ್ಚ ರೂ.3.50 ಲಕ್ಷ / ರೂ.4.00 ಲಕ್ಷ)

2017-18ನೇ ಸಾಲಿನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳ ಕ್ರಿಯಾ ಯೋಜನೆ ವಿವರಗಳನ್ನು ಲಗತ್ತಿಸಿದೆ.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ)**

ವಿವಿಧ ಇಲಾಖೆಗಳ ಕ್ರಿಯಾ ಯೋಜನೆಗಳಿಗೆ ಸಂಬಂಧಿಸಿದಂತೆ ಕೂಲಂಕಷವಾಗಿ ಚರ್ಚಿಸಿದ ನಂತರ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ರಾಜ್ಯ ಅಭಿವೃದ್ಧಿ ಪರಿಷತ್ತಿನ ಅಧ್ಯಕ್ಷರು ಈ ಕೆಳಕಂಡ ಸೂಚನೆಗಳನ್ನು ನೀಡಿದರು.

1. 2017-18ನೇ ಸಾಲಿನಲ್ಲಿ ಇಲಾಖೆಗಳು ಸಲ್ಲಿಸಿದ ಕ್ರಿಯಾ ಯೋಜನೆಗಳಿಗೆ ರಾಜ್ಯ ಅಭಿವೃದ್ಧಿ ಪರಿಷತ್ತಿನಲ್ಲಿ ಅನುಮೋದನೆ ನೀಡಲಾಗುತ್ತಿದ್ದು, ಎಲ್ಲಾ ಇಲಾಖೆಗಳು ಒದಗಿಸಿದ ಅನುದಾನವನ್ನು ಉಪಯೋಗಿಸಿಕೊಂಡು ಶೇ.100 ರಷ್ಟು ಪ್ರಗತಿ ಸಾಧಿಸತಕ್ಕದ್ದು. ( ಕ್ರಿಯಾಯೋಜನೆಗಳನ್ನು ಲಗತ್ತಿಸಿದೆ).

2. ಇಲಾಖೆಗಳು ಯಾವುದೇ ಕಾರಣಕ್ಕೂ ಹಂಚಿಕೆ ಮಾಡಿದ ಅನುದಾನವನ್ನು ವ್ಯಪಗತವಾಗದಂತೆ ಎಚ್ಚರ ವಹಿಸತಕ್ಕದ್ದು.

3. ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದಿಸಿದ ಕ್ರಿಯಾಯೋಜನೆಗಳಿಗೆ ಅವಶ್ಯಕತೆ ಇದ್ದಲ್ಲಿ ತಕ್ಷಣವೇ ಸರ್ಕಾರಿ ಆದೇಶ ಹೊರಡಿಸಿ ಮೊದಲನೇ ತ್ರೈಮಾಸಿಕ ಅನುದಾನವನ್ನು ನಿಯಮಾನುಸಾರ ಬಿಡುಗಡೆ ಮಾಡತಕ್ಕದ್ದು. ಎರಡು, ಮೂರು ಮತ್ತು ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಆಯಾ ಇಲಾಖೆಗಳ ಕಾರ್ಯದರ್ಶಿಗಳಿಗೆ ಅಧಿಕಾರ ನೀಡಿರುವುದರಿಂದ ಮುಂಬರುವ ಕಂತುಗಳ ಅನುದಾನವನ್ನು ಆಯಾ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಿ, ಅನುಮೋನೆಯಾದ ಎಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

4. ಈ ಉಪ ಯೋಜನೆಗಳಡಿ ಅನುದಾನವನ್ನು ವೆಚ್ಚಮಾಡಲು ವಿಫಲರಾದ ಅಧಿಕಾರಿಗಳ ವಿರುದ್ಧ ಕಾಯ್ದೆಯ ಕಲಂ (24) ರಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದು.

5. ಮಾನ್ಯ ಸಮಾಜ ಕಲ್ಯಾಣ ಸಚಿವರು ಮೂರು ತಿಂಗಳುಗಳಿಗೊಮ್ಮೆ ಪ್ರಗತಿ ಪರಿಶೀಲನೆ ನಡೆಸಿ, ಎಲ್ಲಾ ಇಲಾಖೆಗಳು ನಿರೀಕ್ಷಿತ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸಲು ಮಾರ್ಗದರ್ಶನ ನೀಡಿ, ಮೇಲುಸ್ತುವಾರಿಯನ್ನು ವಹಿಸಬೇಕೆಂದು ಸೂಚಿಸಲಾಗಿದೆ.

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನಸೌಧ, ಬೆಂಗಳೂರು

6. ರಾಜ್ಯ ಅಭಿವೃದ್ಧಿ ಪರಿಷತ್‌ನಲ್ಲಿ ಅನುಮೋದಿಸಿದ ಕಾರ್ಯಕ್ರಮಗಳನ್ನು ಬದಲಾಯಿಸಬಾರದು.

7. ಯಾವುದೇ ಯೋಜನೆಗೆ ಯಾವುದೇ ಇಲಾಖೆಯಲ್ಲಿ ಒದಗಿಸಿದ ಅನುದಾನದಲ್ಲಿ ಉಳಿಕೆಯಾಗುವ ಸಾಧ್ಯತೆ ಇದ್ದಲ್ಲಿ ತಕ್ಷಣವೇ ಮರುಹೊಂದಾಣಿಕೆ ಅಥವಾ ಆದ್ಯರ್ಪಣೆ ಮಾಡುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಮುಖಾಂತರ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸುವುದು.

ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ರಾಜ್ಯ ಅಭಿವೃದ್ಧಿ ಪರಿಷತ್ತಿನ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟಂತಹ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ, ಸಚಿವರುಗಳಿಗೆ, ಸದಸ್ಯರುಗಳಿಗೆ ಹಾಗೂ ಎಲ್ಲಾ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸಿದ್ದರಾಮಯ್ಯ)
**ಮುಖ್ಯ ಮಂತ್ರಿಗಳು ಹಾಗೂ ಅಧ್ಯಕ್ಷರು**
**ರಾಜ್ಯ ಅನುಸೂಚಿತ ಜಾತಿಗಳು/ಅನುಸೂಚಿತ**
**ಪಂಗಡಗಳ ಅಭಿವೃದ್ಧಿ ಪರಿಷತ್ತು,**

ಮುಖ್ಯಮಂತ್ರಿಗಳ ಸಚಿವಾಲಯ
ವಿಧಾನಸೌಧ, ಬೆಂಗಳೂರು.